ಜನಶಕ್ತಿ

ಸಂಪುಟ 6 ಸಂಚಿಕೆ 5

೧—೧೧—೧೯೫೭

★

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಪುಟ ೧೦ ಬೆಲೆ: ೧೩ ನ. ಪೈಸೆ

ವಿಮಾನ ಕಾರ್ಖಾನೆ ನೌಕರರ ಹೋರಾಟ

ಸಂಘದ ಇಬ್ಬರು ಪ್ರತಿನಿಧಿಗಳಿಂದ ಉಪವಾಸ ಮುಷ್ಕರ

ಹಿಂದುಸ್ಥಾನ ವಿಮಾನ ಕಾರ್ಖಾನೆಯ 12,000 ನೌಕರರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳಲು ಹೋರಾಟದ ಹಾದಿಯಲ್ಲಿ ನಡೆದಿದ್ದಾರೆ. ಸಂಘದ ಇಬ್ಬರು ಕಾರ್ಯಕರ್ತರುಗಳಾದ ಶ್ರೀ ಜ್ವಾಲನಯ್ಯ ಮತ್ತು ಶ್ರೀ ರಾಮರ್ ಇವರು ನವೆಂಬರ್ 25ರಿಂದ ವಿಧಾನ ಸೌಧದ ಬಳಿ ಉಪವಾಸ ಮುಷ್ಕರವನ್ನಾರಂಭಿಸಿದ್ದಾರೆ. ವಿಮಾನ ಕಾರ್ಖಾನೆಯ ನೌಕರರ ಹೋರಾಟಕ್ಕೆ ಬೆಂಗಳೂರಿನ ಇಡೀ ಕಾರ್ಮಿಕ ವರ್ಗವು ತನ್ನ ಬೆಂಬಲವನ್ನಿತ್ತಿದೆ.

ಕಳೆದ ಮೂರು ವರುಷಗಳಿಂದಲೂ ನೌಕರರ ಸಂಘವು ತುಟ್ಟಿ ಭತ್ಯ, ಬೋನಸ್, ಉಚಿತ ವಾಹನ ಸೌಕರ್ಯ, ಪ್ರಾವಿಡೆಂಟ್ ಫಂಡ್, ಸರ್ವಿಸ್ ಗ್ರಾಚ್ಯುಯಿಟಿ ಮತ್ತಿತರ 18 ಬೇಡಿಕೆಗಳಿಗಾಗಿ ಚಳವಳಿ ನಡೆಸುತ್ತಿದೆ. ಸಂಧಾನ ಮಾತುಕತೆಗಳೆಲ್ಲವೂ ವಿಫಲವಾಗಿ ಕೊನೆಗೆ ನೌಕರರು, ಸರಕಾರದ ಮತ್ತು ವಿಮಾನ ಕಾರ್ಖಾನೆ ಆಡಳಿತ ವರ್ಗದ ಮೇಲೆ ಒತ್ತಾಯ ತರಲು ಹೋರಾಟದ ಹಾದಿಯನ್ನು ತುಳಿದು ಉಪವಾಸ ಮುಷ್ಕರವನ್ನಾರಂಭಿಸಿದ್ದಾರೆ. ವಿಮಾನ ಕಾರ್ಖಾನೆಯು ಕೇಂದ್ರ ಸರಕಾರದ ಉದ್ದಿಮೆಯಾಗಿದ್ದರೂ, ಇಡೀ ಏಷ್ಯದಲ್ಲೇ ಅತ್ಯಂತ ದೊಡ್ಡ ಕಾರ್ಖಾನೆಯಾಗಿದ್ದರೂ, ನೌಕರರಿಗೆ ದೊರಕುತ್ತಿರುವ ಸೌಲಭ್ಯಗಳು ಅತ್ಯಲ್ಪವಾಗಿವೆ. ಇತರೇ ಕೇಂದ್ರ ಸರಕಾರೀ ನೌಕರರಿಗಿಂತಲೂ ಕಡಿಮೆ ಸಂಬಳ ಇಲ್ಲಿಯ ನೌಕರರಿಗೆ ದೊರಕುತ್ತಿದೆ. ಸರಕಾರ ಮತ್ತು ಮಾಲಿಕ ವರ್ಗ ಮೊಂಡುತನದಿಂದ ನೌಕರರ ಬೇಡಿಕೆಗಳನ್ನು ನಿರಾಕರಿಸುತ್ತಾ ಬಂದಿದೆ.

ಸರಕಾರದ ಕಾರ್ಮಿಕ ವಿರೋಧೀ ನೀತಿ !

ನೌಕರರ ಸಂಘವು ಶಾಂತರೀತಿಯಿಂದ ಸಂಧಾನದ ಎಲ್ಲ ಯತ್ನಗಳನ್ನು ನಡೆಸಿದೆ. ವಿವಾದವನ್ನು ಟ್ರಿಬ್ಯೂನಲ್ಲಿಗೆ ಒಪ್ಪಿಸಬೇಕೆಂಬ ಬೇಡಿಕೆಯನ್ನು ಸಹ ಸರಕಾರ ನಿರಾಕರಿಸಿದೆ. ಕೇಂದ್ರ ಹಾಗೂ ರಾಜ್ಯ ಸರಕಾರದ ಕಚೇರಿಯ ಮೆಟ್ಟಲು ಹತ್ತಿ ಅಲ್ಲಿ ನೌಕರರ ಸಂಘದ ಪ್ರತಿನಿಧಿಗಳು ಬೇಸತ್ತಿದ್ದಾರೆ. ಎಲ್ಲ ವಿವಾದಗಳನ್ನು ಟ್ರಿಬ್ಯೂನಲ್ಲಿಗೆ ಹಾಕುವ ಬದಲು ಕೇವಲ ತುಟ್ಟಿಭತ್ಯದ ಪ್ರಶ್ನೆಯನ್ನು ಮಾತ್ರ ಟ್ರಿಬ್ಯೂನಲ್ಲಿಗೆ ಒಪ್ಪಿಸಿ ಸರಕಾರ ನೌಕರರಿಗೆ ದ್ರೋಹ ಬಗೆದಿದೆ. ಕೇಂದ್ರ ಸರಕಾರದ ರಕ್ಷಣಾ ಖಾತೆಯಡಿಯಲ್ಲಿ ವಿಮಾನ ಕಾರ್ಖಾನೆಯು ಇದ್ದರೂ ಸಹ, ಸೌಕರರ ಸಂಘವು ರಕ್ಷಣಾ ಸಚಿವರಿಗೆ ಮನವಿಯನ್ನು ಸಲ್ಲಿಸಿದ್ದರೂ ಸಹ 'ಏನೂ ಪ್ರಯೋಜನವಾಗಲಿಲ್ಲ. ನೌಕರರ ಸಂಘದ ಪ್ರತಿನಿಧಿಗಳು ದೆಹಲಿಗೆ ಹೋಗಿ ಅಲ್ಲಿ ಕಡೆಯ ವರೆಗೂ ಸಂಧಾನ ನಡೆಸಿದರೂ ವಿಫಲವಾಯಿತು. ಸರಕಾರವು ಒಂದೇ ರೀತಿಯ ಹಠದಿಂದ ನೌಕರರ ಬೇಡಿಕೆಗಳನ್ನು ನಿರಾಕರಿಸಿ ಹತ್ತಿಕ್ಕಲು ಯತ್ನಿಸುತ್ತಿದೆ.

ಪಂಡಿತ್ ನೆಹರೂರವರ ಪ್ರಲಾಪ

ಕಳೆದಬಾರಿ ಸರ್ವೋದಯ ಸಮ್ಮೇಳನಕ್ಕೆ ಭೇಟಿಯಿತ್ತಿದ್ದ ಪ್ರಧಾನಿ ನೆಹರೂರವರನ್ನು ವಿಮಾನ ನೌಕರ ಶಿಷ್ಟಮಂಡಲವು ಭೇಟಿ ಮಾಡಿ ತಮ್ಮ ನ್ಯಾಯವಾದ ಬೇಡಿಕೆಗಳ ಬಗ್ಗೆ ಮೆಮೊರಾಂಡಂ ಇತ್ತು, ಅದನ್ನು ಇತ್ಯರ್ಥಗೊಳಿಸಬೇಕೆಂದು ಕೇಳಿಕೊಂಡರು. ಪರಿಶೀಲಿಸುವುದಾಗಿ ಹೇಳಿದ ನೆಹರೂರವರು, ನೌಕರರ ಬೇಡಿಕೆಯನ್ನು ಕಡೆಗಣಿಸಿದ್ದಾರೆ. ಪಾರ್ಲಿಮೆಂಟಿನಲ್ಲಿ ನೌಕರರ ಹೋರಾಟ ವಿಷಯದ ಕುರಿತು ಪಂಡಿತ್ ನೆಹರೂರವರು ಮನಬಂದಂತೆ ಮಾತನಾಡಿದ್ದಾರೆ. ನೌಕರರ ಸಂಘದ 18 ಬೇಡಿಕೆಗಳಲ್ಲಿ 8ನ್ನು ಒಪ್ಪಲಾಗಿದೆಯೆಂದೂ ಎರಡನ್ನು (ತುಟ್ಟಿಭತ್ಯ ಮತ್ತು ಮನೆಬಾಡಿಗೆ ಭತ್ಯ) ಟ್ರಿಬ್ಯುನಲ್‌ಗೆ ಹಾಕಿದೆಯೆಂದೂ ಉಳಿದುದನ್ನು ಕೊಡಲು ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ. ಆದರೆ ಒಪ್ಪಲಾಗಿರುವ ಬೇಡಿಕೆಗಳೆಲ್ಲವೂ ಸಣ್ಣಪುಟ್ಟವುಗಳು. ಮುಖ್ಯವಾದ ಬೇಡಿಕೆಗಳಾದ ಬೋನಸ್, ಉಚಿತ ವಾಹನ ಸೌಕರ್ಯ, ಪ್ರಾವಿಡೆಂಟ್ ಫಂಡ್, ಸರ್ವಿಸ್ ಗ್ರಾಚುಯಿಟಿ ಇವುಗಳನ್ನೇ ಸರಕಾರವು ನಿರಾಕರಿಸುತ್ತಿದೆ. ಮಾದರಿ ಮಾಲಿಕನೆಂದು ಕರೆಸಿಕೊಳ್ಳುವ ಸರಕಾರದ ಕಾರ್ಮಿಕ ವಿರೋಧಿ ನೀತಿ ಇದರಲ್ಲಿ ವ್ಯಕ್ತಗೊಳ್ಳುತ್ತದೆ. ದೇಶದ ರಕ್ಷಣೆಗೆ ವಿಮಾನ ಕಾರ್ಖಾನೆಯು ಬಹು ಮುಖ್ಯವಾದುದು ಎಂದು ಹೇಳುವ ನೆಹರೂರವರು ನೌಕರರ ಬೇಡಿಕೆಗಳಿಗೆ ನಕಾರ ಸೂಚಿಸಿದ್ದಾರೆ.

ಸರಕಾರವು ಗೊಡ್ಡು ಮೊಂಡುತನವನ್ನು ಬದಿಗಿರಿಸಿ, ನೌಕರರ ಹಿತದೃಷ್ಟಿಯಿಂದ, ಕೈಗಾರಿಕೆಯ ಹಿತದೃಷ್ಟಿಯಿಂದ ನೌಕರರ ಬೇಡಿಕೆಗಳನ್ನು ಮಾನ್ಯ ಮಾಡಲಿ ಎಂದು ಒತ್ತಾಯಪಡಿಸುತ್ತೇವೆ.

ನೌಕರರ ದೃಢ ನಿರ್ಧಾರ

ಏನೇ ಆದರೂ ತಮ್ಮ ಬೇಡಿಕೆಗಳನ್ನು ಪಡೆಯುವವರೆಗೂ ಹೋರಾಡಲು ನೌಕರರು ನಿರ್ಧರಿಸಿದ್ದಾರೆ. ಈ ದೃಢ ನಿರ್ಧಾರವು ನವೆಂಬರ್ 25ರಂದು ಹತ್ತು ಸಹಸ್ರಕ್ಕೂ ಮಿಕ್ಕಿ ನೌಕರರು ವಿಮಾನ ಕಾರ್ಖಾನೆಯಿಂದ ಏಳು ಮೈಲುಗಳ ದೂರ ಮೆರವಣಿಗೆಯಲ್ಲಿ ನಡೆದುಬಂದು ಮೆರವಣಿಗೆ ನಡೆಸಿ, ಉಪವಾಸ ಮುಷ್ಕರವನ್ನು ಆರಂಭಿಸಿದುದರಲ್ಲಿ ವ್ಯಕ್ತಗೊಳ್ಳುತ್ತದೆ. ಪೋಲೀಸರು ತಡೆದರೂ ಲೆಕ್ಕಿಸದೆ, ಮೊದಲೇ ಗೊತ್ತಾಗಿದ್ದ ಸ್ಥಳದಲ್ಲಿ ಉಪವಾಸ ಮುಷ್ಕರವನ್ನು ಆರಂಭಿಸಲಾಗಿದೆ. ಕಾರ್ಖಾನೆಯ ಒಳಗೂ ಮತ್ತು ಹೊರಗೂ ನೌಕರರು ಇಂದು ತಮ್ಮ ಹೋರಾಟವನ್ನು ಸಾಗಿಸುತ್ತಿದ್ದಾರೆ. ನೌಕರರ ಹೋರಾಟಕ್ಕೆ ಬೆಂಬಲವಾಗಿ ಬೆಂಗಳೂರಿನ ಕಾರ್ಮಿಕರು, ಸಾರ್ವಜನಿಕರು ಬೆಂಬಲವಿತ್ತಿದ್ದಾರೆ. ವಿಮಾನ ಕಾರ್ಖಾನೆ ನೌಕರರ ಕುಟುಂಬದವರೂ ಸಹ ಮೆರವಣಿಗೆಯಲ್ಲಿ ಬಂದು ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ತೋರಿದ್ದಾರೆ.

ಉಪವಾಸ ಮುಷ್ಕರ ಆರಂಭವಾಗಿ ನಾಲ್ಕು ದಿನಗಳಾಗಿವೆ. ಶಾಂತರೀತಿಯಿಂದ ಪ್ರದರ್ಶನ ಮೆರವಣಿಗೆಗಳು ನಡೆಯುತ್ತಿವೆ. ಪರಿಸ್ಥಿತಿಯು ಕೈಮೀರುವುದಕ್ಕೆ ಎಡೆಗೊಡದೆ ಸರಕಾರವು ಎಚ್ಚೆತ್ತು ಕೂಡಲೇ ಕ್ರಮ ತೆಗೆದುಕೊಳ್ಳಲಿ. ವಿಮಾನ ಕಾರ್ಖಾನೆ ನೌಕರರ ಹೋರಾಟ ಇಂದು ಇಡೀ ಕಾರ್ಮಿಕವರ್ಗದ ಹೋರಾಟವಾಗಿದೆ. ಅವರ ಈ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

★ ವಿಮಾನ ಕಾರ್ಖಾನೆ ನೌಕರರ ಹೋರಾಟಕ್ಕೆ ಜಯವಾಗಲಿ !

★ ಕೇಳಿಕೆಗಳು ಈಡೇರಲಿ !

28—11—'57.

ಬೆಂಗಳೂರು ಕಾರ್ಪೊರೇಷನ್ ಚುನಾವಣೆ

ಕಾರ್ಮಿಕ ಕ್ಷೇತ್ರದಲ್ಲಿ ನಾಗರಿಕ ಸಂಯುಕ್ತ ರಂಗಕ್ಕೆ ಭಾರೀ 'ವಿಜಯ

ಬೆಂಗಳೂರು ನಗರ ಕಾರ್ಪೊರೇಷನ್ ಚುನಾವಣೆಯಲ್ಲಿ ಕಾರ್ಮಿಕರಿಗೆ ಮೀಸಲಾಗಿರುವ 4 ಸ್ಥಾನಗಳಿಗೆ ಚುನಾವಣೆಗಳು ಇದೇ 24—11—47ರಂದು ನಡೆಯಿತು. ನಾಲ್ಕು ಸ್ಥಾನಗಳ ಪೈಕಿ ನಾಗರಿಕ ಸಂಯುಕ್ತ ರಂಗವು ಮೂರು ಸ್ಥಾನಗಳಲ್ಲಿ ಜಯಗಳಿಸಿತು. ಟೆಕ್ಸ್‌ಟೈಲ್ಸ್ ಕ್ಷೇತ್ರದಲ್ಲಿರುವ ಎರಡು ಸ್ಥಾನಗಳ ಪೈಕಿ ಒಂದೂ ಮತ್ತು ನಾನ್ ಟೆಕ್ಸ್‌ಟೈಲ್ ಕ್ಷೇತ್ರದಲ್ಲಿ ಎರಡೂ ಸ್ಥಾನಗಳು ನಾಗರಿಕ ಸಂಯುಕ್ತ ರಂಗಕ್ಕೆ ದೊರಕಿತು. ನಾಗರಿಕ ಸಂಯುಕ್ತ ರಂಗದ ಉಮೇದುವಾರರುಗಳಾಗಿ ಶ್ರೀ ಡಿ. ಎಸ್. ಶ್ರೀರಾಮುಲು (ಕಾರ್ಪೊರೇಷನ್ ಕೆಲಸಗಾರರ ಮುಂದಾಳು ಮತ್ತು ಕಮ್ಯೂನಿಸ್ಟ್ ಪಾರ್ಟಿ ಬೆಂಗಳೂರು ಸಮಿತಿಯ ಸದಸ್ಯರು) ಮತ್ತು ಪಳನಿವೇಲು ನಾನ್ ಟೆಕ್ಸ್‌ಟೈಲ್ಸ್ ಕ್ಷೇತ್ರದಲ್ಲಿಯೂ, ಶ್ರೀ ಕನ್ನಯ್ಯ (ರಿಪಬ್ಲಿಕನ್ ಪಕ್ಷ) ಟೆಕ್ಸ್‌ಟೈಲ್ಸ್ ಕ್ಷೇತ್ರದಲ್ಲಿಯೂ ವಿಜಯಗಳಿಸಿದರು.

ಕಳೆದ ಬಾರಿಯು ಸಹ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಕಾರ್ಮಿಕ ಕ್ಷೇತ್ರದಲ್ಲಿ ಪರಾಜಯವಾಗಿತ್ತು. ಕಾರ್ಮಿಕರು ಎಂದಿನಂತೆ ಈ ಬಾರಿಯೂ ಉತ್ಸಾಹದಿಂದ ಬಂದು ಮತವಿತ್ತು ತಮ್ಮ ನಿಜವಾದ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಾಂಗ್ರೆಸ್ಸಿನ ಕಾರ್ಮಿಕ ವಿರೋಧಿ ನೀತಿಗೆ ತಮ್ಮ [illegible]ಲನ್ನಿತ್ತಿದ್ದಾರೆ.

ಓಟುಗಳ ವಿವರ ಈ ರೀತಿ ಇದೆ.

ಟೆಕ್ಸ್‌ಟೈಲ್ಸ್ ಕ್ಷೇತ್ರ

ಮತದಾರರು 11,490. ಸ್ಥಾನ: 2

ಶ್ರೀ ಆರ್. ಕನ್ನಯ್ಯ (ನಾಗರಿಕ

(ಕೊನೇ ಪುಟ ನೋಡಿ)

ಕರ್ನಾಟಕ ರೈತಸಮ್ಮೇಳನದ ನಿರ್ಣಯಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು)

೧೯೫೭ ನವಂಬರ ತಾ॥ ೧೬ ಮತ್ತು ೧೭ಕ್ಕೆ ಬೆಂಗಳೂರಲ್ಲಿ ಅಖಿಲ ಭಾರತ ಕಿಸಾನ ಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಪ್ರಸಾದ ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿದ ಕರ್ನಾಟಕ ಪ್ರಾಂತ ಪ್ರಥಮ ರೈತ ಸಮ್ಮೇಳನದ ನಿರ್ಣಯಗಳನ್ನು ಇಲ್ಲಿ ಕೊಡಲಾಗಿದೆ.

ಜೋಡಿ—ಇನಾಂ ಗ್ರಾಮಗಳ ಬಗ್ಗೆ

ನಮ್ಮ ರಾಜ್ಯದಲ್ಲಿ ಸುಮಾರು 2,000 ಕ್ಕೂ ಮೇಲ್ಪಟ್ಟ ಜೋಡಿ ಗ್ರಾಮಗಳಿದ್ದು ಅದನ್ನು ರದ್ದು ಮಾಡಲು ಸರ್ಕಾರ ಶಾಸನವನ್ನು ಮಾಡಿ 4 ವರ್ಷಗಳಾದರೂ ಕೆಲವೇ ಗ್ರಾಮಗಳನ್ನಷ್ಟೇ ಸರಕಾರ ವಶಪಡಿಸಿಕೊಂಡಿರುವುದನ್ನು ಈ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ. ಕೆಲವು ಜೋಡಿ ಗ್ರಾಮಗಳು ಸರ್ವೆ ಆಗಿ ಮುಂದಿನ ಕ್ರಮಕ್ಕೆ ಸರಕಾರಕ್ಕೆ ವರದಿ ಕಳಿಸಲ್ಪಟ್ಟಿದ್ದರೂ ಸರಕಾರ ಅದಕ್ಕೆ ಗಮನ ಕೊಡದಿರುವುದು ಶೋಚನೀಯವಾಗಿದೆ. ಇತರ ಕಡೆಗಳಲ್ಲಿ ಜೋಡಿದಾರರು ಅನೇಕ ರೀತಿಯಲ್ಲಿ ರೈತರಿಗೆ ಮೋಸ ಮಾಡುವುದಲ್ಲದೆ ಕೃತ್ರಿಮ ರಿಕಾರ್ಡುಗಳನ್ನು ತಯಾರು ಮಾಡಿಕೊಂಡು ಅವರ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದನ್ನು ಈ ಸಮ್ಮೇಳನವು ಖಂಡಿಸುತ್ತದೆ. ಈ ಗ್ರಾಮಗಳ ಗೋಮಾಳ ಮುಂತಾದ ಜಮೀನುಗಳನ್ನು ಜೋಡಿದಾರರುಗಳು ಕಾನೂನಿಗೆ ವಿರುದ್ಧವಾಗಿ ತಮಗೆ ಬೇಕಾದವರಿಗೆ ಮಾರಿಕೊಂಡಿರುವುದು ಅನ್ಯಾಯ ಮತ್ತು ನ್ಯಾಯಬಾಹಿರವಾಗಿರುತ್ತದೆ. ಜೋಡಿದಾರರುಗಳಿಗೆ ಅನುಕೂಲವಾಗಿರುವ ಧೋರಣೆಯನ್ನು ಸರಕಾರ ಮತ್ತು ಅಧಿಕಾರಿಗಳು ಅನುಸರಿಸುತ್ತಿರುವದರಿಂದ ಕಾನೂನಿನ ಸೌಲಭ್ಯ ರೈತರಿಗೆ ಸಿಗದಂತಾಗಿದೆ. ಇದರಿಂದ ಅನೇಕ ಜೋಡಿಗಳಲ್ಲಿ ಘರ್ಷಣೆಗಳು ನಡೆದು ರೈತರಿಗೆ ಅಪಾರ ನಷ್ಟವಾಗುತ್ತಿದೆ.

ಈ ಸಮ್ಮೇಳನವು ಸರಕಾರ ಕೂಡಲೇ ಎಲ್ಲ ಜೋಡಿಗಳನ್ನು ವಶಪಡಿಸಿಕೊಳ್ಳಬೇಕೆಂದು, ವಿಶೇಷ ಸಿಬ್ಬಂದಿಯನ್ನು ನೇಮಿಸಿ ಸರ್ವೆ ಕೆಲಸವನ್ನು ಜಾಗ್ರತೆ ಮುಗಿಸಬೇಕೆಂದು, ಬಡ ರೈತರು ಜೋಡಿದಾರರುಗಳಿಗೆ ಹಣಕೊಟ್ಟು ಜಮೀನನ್ನು ಪಡೆದಿದ್ದರೆ ಆ ಜಮೀನುಗಳನ್ನು ಅದೇ ರೈತರಿಗೆ ಸರಕಾರ ಖಾಯಂ ಮಾಡಬೇಕೆಂದು ಇತರ ಪಹಿವಾಟುಗಳನ್ನು ರದ್ದುಗೊಳಿಸಬೇಕೆಂದೂ, ಕೇಳಿಕೊಳ್ಳುತ್ತದೆ.

ಅಲ್ಲದೆ ಇನಾಂದಾರರಿಂದ ಹಣ ಕೊಟ್ಟು ಜಮೀನುಗಳನ್ನು ಕೊಂಡುಕೊಂಡಿರುವ ಮತ್ತು ಸರ್ವೆ ಸೆಟ್ಲ್‌ಮೆಂಟ್ ಆಗಿ ಜಮೀನಿನಲ್ಲಿ ಖಾಯಂ ಹಕ್ಕನ್ನು ಪಡೆದಿರುವ ರೈತರು ಭೂಕಂದಾಯದ 20ರಷ್ಟು ಪ್ರೀಮಿಯಂ ಕೊಡಬೇಕೆಂಬ ಇನಾಂ ರದ್ದು ಶಾಸನದ ವಿಧಿಯನ್ನು ತಿದ್ದುಪಡಿ ಮಾಡಿ ಅಂತಹ ರೈತರಿಗೆ ಉಚಿತವಾಗಿ ಜಮೀನು ದೊರೆಯುವಂತೆ ಮಾಡಬೇಕೆಂದೂ ಇನಾಂ ಗ್ರಾಮಗಳ ಬಂಜರು ಜಮೀನುಗಳನ್ನು ವ್ಯವಸಾಯ ಕೂಲಿಗಾರರಿಗೆ ಮತ್ತು ರೈತರಿಗೆ ಹಂಚಬೇಕೆಂದೂ ಈ ಸಮ್ಮೇಳನ ಕೇಳಿಕೊಳ್ಳುತ್ತದೆ.

ಒಕ್ಕಲು ತಪ್ಪಿಸುವುದರ ಬಗ್ಗೆ

1. ಜತ್ತಿ ಸಮಿತಿಯ ವರದಿಯ ಆಧಾರದಲ್ಲಿ ಭೂಸುಧಾರಣೆಯ ಶಾಶನ ಬರುವುದನ್ನು ಗಮನಿಸಿ ಈಗಾಗಲೇ ರೈತರನ್ನು ಹೊಲ ಬಿಡಿಸಲು ವಿವಿಧ ಪ್ರಯತ್ನಗಳು ರಾಜ್ಯದ ಎಲ್ಲಾ ಭಾಗಗಳಲ್ಲೂ ನಡೆಯುತ್ತಿವೆ. ಈ ಪರಿಸ್ಥಿತಿಯಲ್ಲಿ ಯಾರನ್ನೂ ಯಾವ ಕಾರಣದಿಂದಲೂ ಒಕ್ಕಲೆಬ್ಬಿಸಬಾರದೆಂಬ ಆರ್ಡಿನೆನ್ಸನ್ನು ಸರಕಾರ ಕೂಡಲೆ ಹೊರಡಿಸಬೇಕೆಂದು ಈ ಸಮ್ಮೇಳನವು ಸರಕಾರವನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತದೆ.

2. ಹಳೆಯ ಹೈದರಾಬಾದು ಮತ್ತು ಮದ್ರಾಸು ರಾಜ್ಯಗಳಿಗೆ ಒಳಪಟ್ಟಿದ್ದ ಕರ್ನಾಟಕದ ಭಾಗದಲ್ಲಿ ಈಗ ಜಾರಿಯಲ್ಲಿರುವ ಒಕ್ಕಲು ತಪ್ಪಿಸುವುದನ್ನು ನಿಷೇಧಿಸುವ ನಿಯಮವು 1957 ದಶಂಬರ ೩೦ ತ್ತ್ಯಕ್ಕೆ ಕೊನೆಗೊಳ್ಳುವುದರಿಂದ ಅದರ ಅವಧಿಯನ್ನು ಇನ್ನೂ ಎರಡು ವರ್ಷಗಳ ತನಕ ಮುಂದುವರಿಯಬೇಕು. ಎಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಮೂರ್ತೆದಾರರ (ಹೆಂಡ ಇಳಿಸುವವರ) ಬಗ್ಗೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ಸಾವಿರಕ್ಕೂ ಮಿಕ್ಕಿರುವ ತಾಳಿಬೆಲ್ಲ ಮೂರ್ತೆದಾರರ ಪರಿಸ್ಥಿತಿ ಶೋಚನೀಯವಿದೆ.

ಮೂರ್ತೆಯವರ ಸಹಕಾರಿ ಸಂಘಗಳಿಂದ ಮೂರ್ತೆಯವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಲಾಗುತ್ತಿಲ್ಲ. ಈ ಸಹಕಾರಿ ಸಂಘಗಳು ಬೆಲ್ಲದ ವ್ಯಾಪಾರ ನಡೆಸುವುದರ ಬದಲು ಕೇವಲ ಮೂರ್ತೆಯವರನ್ನು ಪೀಡಿಸುವ ಸಂಕದ ಕಟ್ಟೆಗಳಾಗಿ ನಡೆಸಲ್ಪಡುತ್ತವೆ. ಅಧಿಕಾರಿಗಳು ಹೇಳಿದಷ್ಟು ಕಮಿಷನ್ ಪಾವತಿ ಮಾಡದಿದ್ದಲ್ಲಿ ಮೂರ್ತೆಯವರಿಗೆ ಲೈಸನ್ಸು ನಿರಾಕರಿಸಲ್ಪಡುತ್ತಿದೆ, ಪರಿಣಾಮವಾಗಿ ಕೆಲವೆಡೆ ಮೂ

(ಕೊನೇ ಪುಟ ನೋಡಿ)

ಚಿಕ್ಕಮಗಳೂರು ಕಾರ್ಮಿಕರಿಗೆ ಕಾರ್ಮಿಕ ಸಚಿವರ ಭರವಸೆ ?

ಮೈಸೂರು ಸಂಸ್ಥಾನ ಮಾನ್ಯ ಕಾರ್ಮಿಕ ಮತ್ತು ನ್ಯಾಯಂಗ ಸಚಿವರು ಚಿಕ್ಕಮಗಳೂರಿಗೆ ಆಗಮಿಸಿದ್ದರು. ಚಿಕ್ಕಮಗಳೂರು ಜಿಲ್ಲಾ ಜನರಲ್ ವರ್ಕರ್ಸ್ ಯೂನಿರ್ಯನ ಕಾರ್ಯದರ್ಶಿಗಳಾದ ಕಾ॥ ಬಿ. ವೀರಣ್ಣ ಮತ್ತು ಮತ್ತು ಯಂ. ವಿ. ಸುಬ್ಬಯ್ಯನವರು ಸಚಿವರನ್ನು ಭೇಟಿ ಮಾಡಿ ಇಲ್ಲಿಯ ಕಾರ್ಮಿಕರ ವಿಷಯವಾಗಿ ಮನವಿಯೊಂದನ್ನು ಅರ್ಪಿಸಿದರು.

ಈ ಪ್ರದೇಶದಲ್ಲಿ ಕಾರ್ಮಿಕ ವಿವಾದಗಳು ವರ್ಷಗಳೆರಡು ಆದರೂ ತೀರ್ಮಾನವಾಗದೆ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ವಿನಾಕಾರಣ ಕೆಲಸದಿಂದ ತೆಗೆಯುವುದು ಸಂಬಳ ಕಡಿತ ಮಾಡುವುದು, ಪ್ರತಿಫಲವಿಲ್ಲದೆ ಅವಧಿಗಿಂತ ಹೆಚ್ಚು ಕೆಲಸ ಮಾಡಿಸುವುದು ಕಾರ್ಮಿಕ ಇಲಾಖೆಯಲ್ಲಿ ಆದ ಪಂಚಾಯ್ತಿ ತೀರ್ಮಾನವನ್ನು ಮಾಲೀಕರು ಉಲ್ಲಂಘಿಸುವುದು ಮುಂತಾದ ರೀತಿಯಲ್ಲಿ ಕಾರ್ಮಿಕರ ಸ್ಥಿತಿ ಕೆಡುತ್ತಿದೆಯೆಂದು ಮಾನ್ಯ ಕಾರ್ಮಿಕ ಸಚಿವರಿಗೆ ವಿಶಯ ಮನದಟ್ಟು ಮಾಡಲಾಯಿತು. ಇದಕ್ಕೆ ಉತ್ತರವಾಗಿ ಮಾನ್ಯ ಸಚಿವರು ಆದಷ್ಟು ಬೇಗ ವಿವಾದಗಳನ್ನು ಪರಿಶೀಲಿಸುವುದಾಗಿ ಭರವಸೆಯನ್ನಿತ್ತರು.

ನಮ್ಮ ಈ ಕಾರ್ಮಿಕ ಮಂತ್ರಿ ಶ್ರೀ. ಬಾಳಿಗರು ಭರವಸೆಗಳ ಮೇಲೆ ಭರವಸೆ ಈಯುವುದರಲ್ಲಿ ಎತ್ತಿದ ಕೈ. ಆದರೆ ಇದನ್ನು ಕಾರ್ಯರೂಪದಲ್ಲಿ ತರುವಾಗ ಮಾತ್ರ ಇವರು ಜಾರಿಕೊಳ್ಳುವುದರಲ್ಲಿ ಜಾಣರೂ ಆಗಿದ್ದಾರೆ. ಈ ಬಾರಿಯಾದರೂ ತಾವಿತ್ತ ಭರವಸೆಯನ್ನು ಪಾಲಿಸುವರೆ ?

ಚಿಂತಾಮಣಿ ರೈತಸಭೆಯಲ್ಲಿ ಜತ್ತಿವರದಿಯ ಖಂಡನೆ

"ಡಿಸೆಂಬರ್ ತಿಂಗಳಲ್ಲಿ ನಡೆಯುವ ಶಾಸನ ಸಭಾಧಿವೇಶನದಲ್ಲಿ ಸರ್ಕಾರದವರು ಮಂಡಿಸುವ ಭೂಸುಧಾರಣೆ ಬಗ್ಗೆ ನಿರ್ಣಯವನ್ನು ಕರ್ನಾಟಕದ ರೈತಾಂಗ ಪ್ರಗತಿಯಾಗಬೇಕೆಂಬ ಮನಸ್ಸುಳ್ಳ ಎಲ್ಲಾ ಶಾಸನ ಸಭಾ ಸದಸ್ಯರೂ ಪಕ್ಷ ರಾಜಕೀಯಗಳನ್ನು ತೊರೆದು ಏಕ ಕಂಠದಿಂದ ವಿರೋಧಿಸಬೇಕು. ಮತ್ತು ಪ್ರಗತಿಪರ ಭೂಸುಧಾರಣೆಯನ್ನು ಜಾರಿಗೆ ತರಲು ತಮ್ಮ ಯಾವತ್ತು ಶಕ್ತಿಯಿಂದ ಶ್ರಮಿಸಬೇಕು." ಎಂಬುದಾಗಿ ಚಿಂತಾಮಣಿಯಲ್ಲಿ ತಾರೀಖು ೨೩-೧೧-೫೭ರಂದು ಸಂಜೆ ಅಜಾದ್ ಚೌಕದಲ್ಲಿ ಮೂರು ಸಹಸ್ರಕ್ಕೂ ಹೆಚ್ಚಿಗೆ ಸೇರಿದ್ದ ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷರೂ, ವಿಧಾನ ಸಭೆಯ ಕಮ್ಯೂನಿಸ್ಟ್ ಸದಸ್ಯರೂ ಆದ ಶ್ರೀ ಟಿ. ಕೆ. ಗಂಗಿರೆಡ್ಡಿಯವರು ಕರೆಯಿತ್ತರು. ಕರ್ನಾಟಕ ಪ್ರಾಂತ ಕಿಸಾನ್ ಕೌನ್ಸಿಲ್ಲಿನ ಸದಸ್ಯರಾದ ಎಂ. ನಂಜುಂಡ ಗೌಡರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಗಂಗಿರೆಡ್ಡಿಯವರು ಮುಂದುವರಿದು "ಜತ್ತಿ ಸಮಿತಿಯ ವರದಿಯು ಕಳೆದ ಎರಡು ದಶಕಗಳಿಂದ ಪ್ರಾಂತ್ಯದ ರೈತಾಂಗ ಯಾವ ಪ್ರಗತಿಪರ ಭೂಸುಧಾರಣೆಯಾಗಬೇಕೆಂದು ಹೋರಾಟ ನಡೆಸಿದರೊ, ಕಾರವಾರದ ರೈತ ನಾಯಕರಾದ ಗಣುಮಹಾಬಲ ನಾಯಕ್ ಅಂತಹವರು ಪ್ರಾಣಾರ್ಪಣೆ ಮಾಡಿದರೋ ಅವರ ಉದ್ದೇಶಕ್ಕೆ ಅಪಮಾನ ಮಾಡಿದಂತಾಗಿದೆ. ಪ್ರಾಂತ್ಯದ ರೈತರು ಸಾಮೂಹಿಕವಾಗಿ ಶಾಂತಿಯುತ ಪ್ರದರ್ಶನಗಳನ್ನು ನಡೆಸಿ ಈ ವರದಿಯನ್ನು ವಿರೋಧಿಸಬೇಕು, ಎಂದರು.

ಶ್ರೀಯುತ ಕಾಂ. ಕೆ. ಎಂ. ಕೃಷ್ಣಾರೆಡ್ಡಿ, ಕಾ॥ ಅಬ್ದುಲ್ ಜಬ್ಬಾರ್ ಮತ್ತು ಎಚ್. ಎಸ್. ರಾಮರಾವ್ ಇವರು ಕೋಲಾರ ಜಿಲ್ಲೆಯ ಕ್ಷಾಮ ಪರಿಸ್ಥಿತಿಯ ಬಗ್ಗೆ ಸರಕಾರದ ಉದಾಸೀನ ನೀತಿಯನ್ನು ತೀವ್ರವಾಗಿ ಖಂಡಿಸಿದರು.

ಗೂಳೂರು ಅರುಣಾ ಬುರ್ರಕಥಾ ದಳದವರಿಂದ ಕೇರಳ ಚರಿತೆ, ಕಾಂಗ್ರೆಸ್ಸು ಮಂತ್ರಿ-ರೈತ ಮೊದಲಾದ ರಾಜಕೀಯ ಸಾಂಸ್ಕೃತಿಕ ಪ್ರದರ್ಶನಗಳು ನಡೆದು ಸಭಿಕರ ಮನಸ್ಸನ್ನು ಆಕರ್ಷಿಸಿತ್ತು. ಜೈಕಾರಗಳಿಂದ ಸಭೆಯು ಮುಕ್ತಾಯವಾಯಿತು.

—o—

— ಮಂಗಳೂರು ಪತ್ರ —

(೯ನೇ ಪುಟದಿಂದ)

ದೆ ಆಶ್ಚರ್ಯದ ಸಂಗತಿ !

ಹೇಗಿದ್ದರೂ ಜಿಲ್ಲೆಯ ರೈತರು ಕರ್ನಾಟಕದ ಇತರ ಭಾಗಗಳ ರೈತರಂತೆಯೆ ಭೂಮಸೂದೆ ಬರುವಂತೆ ಸರಕಾರವನ್ನು—ಅದು ಹನುಮಂತಯ್ಯ ಸರಕಾರವೇ ಆಗಲಿ—ನಿಜಲಿಂಗಪ್ಪ ಸರಕಾರವೇ ಆಗಲಿ—ಒತ್ತಾಯಿಸಲು ಬೇಕಾದ ಎಂತಹ ಹೋರಾಟ, ತ್ಯಾಗಗಳಿಗೂ ಸಿದ್ಧರಿದ್ದಾರೆ ಎಂಬುದನ್ನು ಈ ಮುಖಂಡರು ತಿಳಿದುಕೊಳ್ಳಬೇಕಾದುದು ಅತ್ಯಗತ್ಯ.

"ಶ್ರೀನಿವಾಸ್"

ಭದ್ರತಾ ಸಮಿತಿಯಲ್ಲಿ ಕಾಶ್ಮೀರ:
ಸಾಮ್ರಾಜ್ಯಶಾಹಿ ಪಿತೂರಿಗೆ ರಷ್ಯನ್ 'ವಿಟೋ'
ಅಮೆರಿಕಾ-ಬ್ರಿಟನ್-ಪಾಕ್‌ಗೆ ತೀವ್ರ ಅತೃಪ್ತಿ!

ಪಂಚ ರಾಷ್ಟ್ರಗಳ ನಿರ್ಣಯಕ್ಕೆ ರಷ್ಯಾದ ಅರ್ಧ ಚಂದ್ರ!

ಕಳೆದ ಹತ್ತು ವರುಷಗಳಿಂದ ವರ್ಷಕ್ಕೆ ಎರಡು ಮೂರುಸಲ ಕಾಶ್ಮೀರ ಪ್ರಶ್ನೆಯನ್ನು ವಿಶ್ವಸಂಸ್ಥೆಯಲ್ಲೊ, ಭದ್ರತಾ ಸಮಿತಿಯಲ್ಲೋ ಎತ್ತಿ, ಭಾರತ-ಪಾಕ್ ರಾಷ್ಟ್ರಗಳ ನಡುವೆ ಚಿರವಾದ ಸ್ನೇಹ ಸಂಪರ್ಕವೇರ್ಪಡದಂತೆ, ಅಮೆರಿಕಾ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿಗಳು ಪ್ರಯತ್ನಿಸುತ್ತಾ ಬಂದಿದ್ದಾರೆ. ಬಾರಿ ಬಾರಿ ರಷ್ಯಾ, ಭದ್ರತಾ ಸಮಿತಿಯಲ್ಲಿ, 'ಕಾಶ್ಮೀರ ಪಿತೂರಿ' ಅಂಗವಾಗಿ ಸಾಮ್ರಾಜ್ಯಶಾಹಿಗಳು ಮಂಡಿಸಿದ ನಿರ್ಣಯದ ಮೇಲೆ ತನ್ನ 'ವಿಟೋ' ಶಕ್ತಿಯ ಏಟನ್ನು ಈಯುತ್ತಾ ಬಂದಿದೆ. ರಷ್ಯಾದ 'ವಿಟೋ' ಅಲ್ಲದಿದ್ದರೆ, ಬಲಪ್ರಯೋಗ ಮಾಡಲು, ಪಾಕಿಸ್ಥಾನಕ್ಕೆ ಸಾಕಷ್ಟು ಯುದ್ಧೋಪಕರಣಗಳ ಸರಬರಾಜು ನಡೆಸಿದ ಅಮೆರಿಕಾದ ಪಿತೂರಿ ಯಶಸ್ವಿಯಾಗುತ್ತಿತ್ತೆಂಬುದು ನಿರ್ವಿವಾದ!

ಮೊನ್ನೆ ಭದ್ರತಾ ಸಮಿತಿಯಲ್ಲಿ ಅಮೆರಿಕಾ-ಬ್ರಿಟನ್‌ನೊಡಗೂಡಿ ಪಂಚ ರಾಷ್ಟ್ರಗಳು ಮಂಡಿಸಿದ ನಿರ್ಣಯದ ಮೇಲೆ ಪುನಃ ರಷ್ಯಾ ತನ್ನ 'ವಿಟೋ' ಚಲಾಯಿಸುವ ಸೂಚನೆ ಕೊಟ್ಟಿದೆ.

ಕಾಶ್ಮೀರದಲ್ಲಿ ಸಾಮ್ರಾಜ್ಯಶಾಹಿಗಳ ಯಾವೊಂದು ಕಾರಸ್ಥಾನಕ್ಕೂ ತಣ್ಣೀರೆರಚಿದಂತಾದುದು, ಭಾರತ-ರಷ್ಯಾದೊಳಗಿನ ಪ್ರಬಲವಾಗುತ್ತಿರುವ ಮೈತ್ರಿಯ ಫಲ. ಅದರ ವಿರುದ್ಧ ಕೆಲವು ಅಮೆರಿಕಾ ಮಿತ್ರರಾದ ಕೇಂದ್ರ ಮಂತ್ರಿಗಳೂ, ಪಿ. ಎಸ್. ಪಿ. ನಾಯಕರು ನಡೆಸುವ ಯತ್ನವನ್ನು ಇನ್ನಾದರೂ ನಿಲ್ಲಿಸಿ, ತಮ್ಮ ಪ್ರಯತ್ನ ರಾಷ್ಟ್ರಘಾತುಕವಾದುದೆಂದು ಇನ್ನಾದರೂ ಯೋಚಿಸುವ ಸಂದರ್ಭವೊದಗಿದೆ.

ಕಂಗೆಟ್ಟ ಅಮೆರಿಕಾ ಗುಂಪು!

ರಷ್ಯಾದ 'ವಿಟೋ' ಹೆದರಿಕೆ ಮೊದಲೇ ಗರ್ಭಕ್ಕೆ ತಾಗಿದ್ದ ಅಮೆರಿಕಾ ಗುಂಪು, ಭದ್ರತಾ ಸಮಿತಿಯಲ್ಲಿ ರಷ್ಯಾದ ಪ್ರತಿನಿಧಿ ಆರ್ಕಾಡಿ ಸೊಬೊಲೊಲ್‌ರ ಭಾಷಣ ಕೇಳಿ ಮತ್ತಷ್ಟು ಕಂಗೆಟ್ಟಿವೆ. ಹುಚ್ಚೆದ್ದು ಕೂಗ ಹತ್ತಿವೆ. "ಕಾಶ್ಮೀರ ನಮ್ಮ 'ಮಗು' ಅಥವಾ ಕೈಗೊಂಬೆಯಲ್ಲ; ನಾವು ಪಾಕಿಸ್ತಾನ ಮತ್ತು ಭಾರತ ಸೌಹಾರ್ದಯುತವಾಗಿ ಜೀವಿಸಬೇಕೆಂದೇ ಈ ಪಂಚರಾಷ್ಟ್ರಗಳ ಸಂಯುಕ್ತ ನಿರ್ಣಯವನ್ನು ಮಂಡಿಸಿದ್ದು; ಈ ನಿರ್ಣಯದಿಂದಾಗಿ ಭಾರತ-ಪಾಕ್ ಸದಾ ಪರಸ್ಪರ ಚರ್ಚಾನಿರತ (engaged) ರಾಗಿರಲು ಸಾಧ್ಯವಾಗುತ್ತದೆ, ಆದರೆ ಮೆನನರು ನಮ್ಮೆಲ್ಲಾ ಪ್ರಯತ್ನಗಳನ್ನು ತಿರುವು ಮರುವು ಮಾಡಿದ್ದಾರೆ." ಎಂದು ಅಮೆರಿಕಾ ರೋಧಿಸ ಹತ್ತಿದೆ. ಅಮೆರಿಕಾ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಿದುದು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಶತ್ರುಯ ಸಮತೂಕವಿರಲೆಂದಂತೆ.

ಕೊನೆಯದಾಗಿ, ತನ್ನ ನಿರ್ಣಯಕ್ಕೆ ಸೋಲು ಖಂಡಿತವೆಂದಾದ ಮೇಲೆ, ಇನ್ಯಾವ ನಿರ್ಣಯವನ್ನು ಮಂಡಿಸಬೇಕೆಂದು ತಿಳಿಯದೆ ಅಮೆರಿಕಾ ಕಂಗೆಟ್ಟ ಕೈಕಟ್ಟಿ ಕೂತಿದೆ. ಕಾಶ್ಮೀರಕ್ಕೆ ಗ್ರಹಾಂ ನಿಯೋಗ ಕಳಿಸಿಯಾದರೂ ಮಾನ ಉಳಿಸಿಕೊಳ್ಳಬೇಕೆಂಬ ಅಮೆರಿಕಾ ಗುಂಪಿ ನಿರ್ಣಯಕ್ಕೆ ರಷ್ಯಾದ 'ವಿಟೋ' ಇದೆ. ಭಾರತದ ಸಂಪೂರ್ಣ ವಿರೋಧವಿದೆ.

ಸೊಬೊಲೋವ್‌ರಿಂದ ಅಮೆರಿಕಾ ಪಿತೂರಿಯ ಉಗ್ರ ಖಂಡನೆ

"ನಿಶ್ಶಸ್ತ್ರೀಕರಣದ ಮಾತು ಬಂದಾಗ ಪಾಕಿಸ್ಥಾನಕ್ಕೆ ಅಮೆರಿಕಾದ ಶಸ್ತ್ರಾಸ್ತ್ರ ಸರಬರಾಜಿನ ಪ್ರಶ್ನೆಯೂ ಅಡಕವಾಗಬೇಕು. ಯಾಕೆಂದರೆ ಇವರಿಂದಾಗಿಯೇ ಕಾಶ್ಮೀರ ಪ್ರಶ್ನೆ ಹದಗೆಟ್ಟದ್ದೆಂಬ, ರಷ್ಯಾದ ಪ್ರತಿನಿಧಿ ಆರ್ಕಾಡಿ ಸೊಬೊಲೋವ್ ರವರ ಉಗ್ರ ಟೀಕೆಗೆ ಅಮೆರಿಕಾ ತತ್ತರಿಸಿದೆ.

"ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮ ರಾಜಕೀಯ ದುರುದ್ದೇಶ ಪೂರೈಕೆಗೆ ಕಾಶ್ಮೀರ ಪ್ರಶ್ನೆಯನ್ನು ಉಪಯೋಗಿಸಿಕೊಂಡು, ಒಂದು ಪಕ್ಷವು ಒಪ್ಪಲಾರದ ತೀರ್ಮಾನವನ್ನು ಅದರ ಮೇಲೆ ಹೇರಲು ಪ್ರಯತ್ನಿಸಿದ್ದಾರೆ.

"ಪಾಕಿಸ್ತಾನಾಕ್ರಮಿತ ಕಾಶ್ಮೀರ ಭಾಗವನ್ನು ಒಂದು ಕೋಟೆಯಾಗಿ, ಒಂದು ಯುದ್ಧನೆಲೆಯಾಗಿ ಪರಿವರ್ತಿಸಲು, ಪಾಕಿಸ್ತಾನಕ್ಕೆ ಸರ್ವ ಯುದ್ಧೋಪಕರಣಗಳನ್ನು ಅಮೆರಿಕಾ ಇತ್ತಿದೆ. ಆಧುನಿಕಾಧುನಿಕ ಶಸ್ತ್ರಾಸ್ತ್ರಗಳು, ಹೊಸಹೊಸ ವಿಮಾನ ನಿಲ್ದಾಣಗಳನ್ನು, ಯುದ್ಧ ನೆಲೆಗಳನ್ನು ನಿರ್ಮಿಸುವಂತೆ ಅಮೆರಿಕಾ ಪಾಕಿಸ್ತಾನವನ್ನು ಉತ್ತೇಜಿಸಿದ್ದೇ ಅಲ್ಲ, ನೇರವಾಗಿ ಇದರಲ್ಲಿ ಭಾಗವಹಿಸಿದೆ. ಇದು ಮತ್ತು ಸೀಟೊ ಮತ್ತಿತರ ಯುದ್ಧ ಕೂಟಗಳನ್ನು ರಚಿಸಿ, ಕಾಶ್ಮೀರದ ಪ್ರಶ್ನೆಗೆ ಶಾಂತಿಯುತ ಪರಿಹಾರವೇ ಸಾಧ್ಯವಿಲ್ಲದಂತಾಗುವಂತೆ ಅಮೆರಿಕಾ ಪ್ರಯತ್ನಿಸಿದೆ, ಯಶಸ್ವಿಯೂ ಆಗಿದೆ. ಪರಿಸ್ಥಿತಿ ಹೀಗಿದ್ದು, ಹತ್ತು ವರ್ಷಗಳಿಂದ ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಪ್ರಶ್ನೆಯು ಏನೊಂದು ಪರಿಹಾರ ಕಾಣದೆ ಕೊಳೆಯುತಿದೆ. ಬಾರಿ ಬಾರಿಗೆ ಕಾಶ್ಮೀರಕ್ಕೆ ಹೋದ ನಿಯೋಗಗಳು ಅಯಶಸ್ವಿಯಾದರೂ, ಯಾರಿಂಗರೇ ಇಂದು ಕಾಶ್ಮೀರ ಪರಿಸ್ಥಿತಿ ಬದಲಾಗಿದೆ, ಹಿಂದಿನ ನಿಯೋಗಗಳ (ಯು. ಎನ್. ಸಿ. ಐ. ಪಿ) ಸೂಚನೆಗಳೇನೆ ಇದ್ದರೂ ಅವು ಇಂದು ಫಲಕಾರಿಯಾಗದೆಂದು ಹೇಳಿದ್ದರೂ, ಇನ್ನೂ ಹಿಂದಿನ ರೀತಿಯಲ್ಲೇ ಕಾಶ್ಮೀರ ಬಿಕ್ಕಟ್ಟನ್ನು ಪರಿಹರಿಸಬೇಕೆಂಬ ಈ ನಿರ್ಣಯವನ್ನು ರಷ್ಯಾಕ್ಕೆ ಸ್ವೀಕರಿಸಲು ಅಸಾಧ್ಯ.

"ಕಳೆದ ಹತ್ತು ವರುಷಗಳಲ್ಲಿ ಕಾಶ್ಮೀರ ಪ್ರಶ್ನೆಯ ರೂಪುರೇಷೆ ಬದಲಾಗಿದೆ, ಈ ಘಟ್ಟದಲ್ಲಿ ಅಮೆರಿಕಾ ಪ್ರಯತ್ನ-ಕಾಶ್ಮೀರ ಬಿಕ್ಕಟ್ಟನ್ನು, ಈ ನಿರ್ಣಯಗಳಿಂದ ಜೀವಂತವಾಗಿಯೇ ಇಡುವುದಾಗಿದೆ.' ಎಂದಂದ ಆರ್ಕಾಡಿ ಸೊಬೊಲೋವ್ ಅಮೆರಿಕಾ ಗುಂಪು ಮಂಡಿಸಿದ ನಿರ್ಣಯಕ್ಕೆ 'ವಿಟೋ' ಪ್ರಯೋಗ ಮಾಡುವುದು ಖಂಡಿತವೆಂದು ಘೋಷಿಸಿದ್ದಾರೆ

ಕೃಷ್ಣಮೆನನರ ಖಂಡ ತುಂಡ ಟೀಕೆ

ಭಾರತದ ಪ್ರತಿನಿಧಿಯಾದ. ಶ್ರೀ ಕೃಷ್ಣ ಮೆನನರು ಕಾಶ್ಮೀರದ ಪ್ರಶ್ನೆಯ ಮೇಲೆ ಮಾತಾಡುತ್ತಾ ಪಾಕಿಸ್ತಾನದ ಸುಳ್ಳುಗಳ ಕಂತೆಗೆ ಉತ್ತರ ಕೊಡಲು ನಮಗೆ ಸಮಯವಿಲ್ಲ ಹಾಗೂ ಅವಶ್ಯಕತೆಯಿಲ್ಲವೆಂದು ನೂನ್‌ರವರಿಗೆ ಉತ್ತರವಾಗಿ ನುಡಿದರು. ಯಾರಿಂಗ್ ಮತ್ತು ಗ್ರಹಾಂರವರು ಕಾಶ್ಮೀರದ ಬಗ್ಗೆ ಇತ್ತ ವರದಿಯಲ್ಲಿನ ಅಂಶಗಳನ್ನು ಎತ್ತಿ ನೂನ್‌ರವರು ಮುಂದಿಟ್ಟ "ಕೈಗೊಂಬೆ ವಿರೋಧಕ್ಕೆ" ಪ್ರತಿಭಟನೆ ಅನಾವಶ್ಯಕವೆಂದು ಕೃಷ್ಣ ಮೆನನರು ಹೇಳಿದರು.

"ಪಾಕಿಸ್ತಾನಾಕ್ರಮಿತ ಕಾಶ್ಮೀರ ಪ್ರದೇಶದಲ್ಲಿ 43 ಬೆಟಲಿಯನ್‌ಗಳಿವೆ. ಇಂದು ಅದು ಕಮ್ಮಿಯಾಗಿದ್ದರೆ ಆ ಸೇನೆಯನ್ನು ಇನ್ನಷ್ಟು ಆಧುನಿಕ ರೀತಿಯಲ್ಲಿ ಸಜ್ಜಿತಗೊಳಿಸಿದೆ ಎಂದು ಮೆನನ್ ನುಡಿದರು. ವಿಶ್ವವು ಯಾವುದೇ ಅಭಿಪ್ರಾಯಕ್ಕೆ ಬರಲಿ; ಭಾರತ ತನ್ನ ನ್ಯಾಯವಾದ ನಿಲುವಿನ ಬಗ್ಗೆ ತೃಪ್ತಿಯನ್ನು ತಳೆದಿದೆ. ಈ ಕಾರಣದಿಂದಾಗಿಯೇ ನಮ್ಮ ವಿರೋಧಿಗಳೊಡನೆ ಕೂಡಿಕೊಂಡಿರುವ ರಾಷ್ಟ್ರಗಳೊಡನೆ ಕೂಡಾ ನಾವು ಗೆಳೆತನದಿಂದಿದ್ದೇವೆ.

"ಇಂದು ಭದ್ರತಾ ಸಮಿತಿಯು ಭಾರತವು ಮಂಡಿಸಿದ ವಿವಾದವನ್ನು ವೀಕ್ಷಿಸಲಿ. ಹಾಗೂ ಪಾಕಿಸ್ತಾನ ಕೊಟ್ಟ ಉತ್ತರವನ್ನು ಗಮನಿಸಲಿ. ಪಾಕಿಸ್ಥಾನ ಕಾಶ್ಮೀರವನ್ನು ಆಕ್ರಮಿಸಿದೆ ಎಂಬುದು ಸ್ಪಷ್ಟವಾಗಿ ತಿಳಿದು ಬರುವುದೆಂದು ಕೃಷ್ಣಮೆನನ್ ಹೇಳಿದರು.

"ಭಾರತದ ಸುತ್ತ ಇರುವ ಯುದ್ಧ ಯಂತ್ರಗಳ ಬಗ್ಗೆ ಭಾರತ ಖೇದ ಪಡುತ್ತದೆ. ಪಾಕಿಸ್ಥಾನ ಭಾರತದ ಗಡಿ ಪ್ರದೇಶದಲ್ಲಿ ನಡೆಸುತ್ತಿರುವ ಆಕ್ರಮಣ, ಗಲಭೆಗಳು ತುಂಬಾ ಇವೆ.

'ಪಾಕಿಸ್ತಾನದ ಗಡಿಯನ್ನು ನಾವು ಉಲ್ಲಂಘಿಸಿದ್ದೇವೆಂದು ಒಮ್ಮೆಯೂ ಪಾಕಿಸ್ಥಾನ ದೂರು ಕೊಟ್ಟಿದೆಯೇ? ಆದರೆ ನಮ್ಮ ಗಡಿಯನ್ನು ಪಾಕಿಸ್ಥಾನ ಉಲ್ಲಂಘಿಸಿದ ಎಷ್ಟೋ ನಿದರ್ಶನಗಳಿವೆ. ನಾವು ಈ ಬಗ್ಗೆ ದೂರುಗಳನ್ನು ಕೊಟ್ಟಿಲ್ಲ, ಏಕೆಂದರೆ ಇದರಿಂದ ಸುಮ್ಮಗೆ ಕಹಿ ವಾತಾವರಣ ಹುಟ್ಟುತ್ತಿತ್ತು. ಆದರೂ ವಿಶ್ವಸಂಸ್ಥೆಯಾಗಲಿ ಭದ್ರತಾ ಸಮಿತಿಯಾಗಲೀ ಇವೊಂದನ್ನೂ ಗಮನಿಸಿದಂತೆ ತೋರಿ ಬರುವುದಿಲ್ಲ.

"ಆದರೆ ಒಂದು ದಿನ ಖಂಡಿತ ಬರುತ್ತೆ, ಆಗ ಭದ್ರತಾ ಸಮಿತಿಯಲ್ಲಿರುವ, ಬೃಹದ್ ರಾಷ್ಟ್ರಗಳು, ತಾವು ಪ್ರೋತ್ಸಾಹಿಸುತ್ತಿರುವ 'ದರೋಡೆಕೋರತನ-ಈ ರಾಜಕೀಯ, ದರೋಡೆಕೋರ ತನದ' ಬಗ್ಗೆ ತಾವೇ ಪಶ್ಚಾತ್ತಾಪ ಪಡಬೇಕಾಗುವುದು ಎಂದು ಕೃಷ್ಣ ಮೆನನರು ಪಾಶ್ಚಿಮಾತ್ಯ ಹಿರಿಯ ರಾಷ್ಟ್ರಗಳನ್ನುದ್ದೇಶಿಸಿ, ಖಂಡತುಂಡವಾಗಿ ಟೀಕಿಸಿದರು.

ಕಾಶ್ಮೀರಕ್ಕೆ ಇನ್ನೊಂದು ನಿಯೋಗವನ್ನು ಕಳಿಸುವ ಅಮೆರಿಕಾ ಗುಂಪಿನ ನಿರ್ಣಯವನ್ನು ಅವರು ತಿರಸ್ಕರಿಸಿದರು. ಅಲ್ಲದೆ, ಕಾಶ್ಮೀರಕ್ಕೆ ಯಾವ ನಿಯೋಗ ಕಳಿಸಿದರೂ, ಮೊದಲು ಪಾಕಿಸ್ತಾನ ಕಾಶ್ಮೀರವನ್ನು ಅಕ್ರಮವಾಗಿ ಆಕ್ರಮಿಸಿದೆ ಎಂಬ ಭಾರತದ ದೂರನ್ನು ಒಪ್ಪಿಯೇ ಆ ನಿಯೋಗ ಬಂದರೆ, ಕಾಶ್ಮೀರ ಪ್ರಶ್ನೆಗೆ ಪರಿಹಾರ ಸಾಧ್ಯ. ಅಮೆರಿಕಾವಾಗಲಿ, ಬ್ರಿಟನ್ನಾಗಲಿ ತಾವು ನಡೆಸುತ್ತಿರುವ 'ಪಾರ್ಟಿಸನ್' (ಏಕಪಕ್ಷೀಯ) ಕುತಂತ್ರವನ್ನು ತಳೆದು ಮುಂದು ಮಾಡುವ ಯಾವುದೇ ನಿರ್ಣಯವು ಕಾಶ್ಮೀರ ಬಿಕ್ಕಟ್ಟನ್ನು ಪರಿಹರಿಸಲು ಸಹಾಯಕಾರಿಯಾಗದು. ಹಾಗೂ ಅದು ಭಾರತಕ್ಕೆ ಒಪ್ಪಿತವಾಗದೆಂದರು.

"ಇನ್ನು 'ಪ್ಲಬಿಸೈಟ್' ಪ್ರಶ್ನೆಯೇ ಇಲ್ಲಿ ಮೂಡುವುದಿಲ್ಲ. ಏಕೆಂದರೆ, ಪಾಕಿಸ್ತಾನಾಕ್ರಮಿತ ಕಾಶ್ಮೀರದಲ್ಲಿ, ಎಂದಿನವರೆಗೆ ಅಮೆರಿಕಾ ಸಹಾಯದಡಿಯಲ್ಲಿ, ಆಧುನಿಕ ಶಸ್ತ್ರಾಸ್ತ್ರ ಸಜ್ಜಿತ ಸೇನೆಗಳಿವೆಯೋ ಅಲ್ಲಿನವರೆಗೆ ಈ ಪ್ರಶ್ನೆಯ ಪ್ರಸ್ತಾಪ ಮಾಡಬೇಡಿ, ಭಾರತ ಇದನ್ನು ಕಡೆಗಣಿಸುವುದು. ಅದರೆ ಇನ್ನು ಮುಂದೂ 'ಯುನೋ' ಘಟನೆಗನುಗುಣವಾಗಿ, ಈಗ ನಡೆಸಲಾಗುತ್ತಿರುವ ಕಾಶ್ಮೀರ 'ಆಟ'ಕ್ಕೆ ಹೊಂದಿಕೊಂಡೇ ನಮ್ಮ ನೀತಿಯನ್ನು ರೂಪಿಸಿಕೊಳ್ಳುವೆವೆಂದು ಮೆನನರು ಪಾಶ್ಚಿಮಾತ್ಯ ರಾಷ್ಟ್ರಗಳ ಅಸಹಾಯಕತೆಯನ್ನು ಹೆಚ್ಚಿಸಿ ಉರಿಕಾರುವ ಭಾಷಣದಲ್ಲಿ ಭಾರತದ ನಿಲುವನ್ನು ಸ್ಪಷ್ಟಪಡಿಸಿದರು.

ರಾಷ್ಟ್ರೀಯ ರಕ್ಷಣಾ ನಿಯಮಗಳ ರದ್ದಿಯಾತಿಗೆ ಒತ್ತಾಯ

ಅನೇಕ ಸರಕಾರೀ ನೌಕರರನ್ನು ಅನ್ಯಾಯದಿಂದ ನಿವೃತ್ತಿಗೊಳಿಸಲು ಕಾರಣವಾದ ಸೇಫ್‌ಗಾರ್ಡಿಂಗ್ ಆಫ್ ನ್ಯಾಷನಲ್ ಸೆಕ್ಯೂರಿಟಿ ರೂಲ್ಸ್ (ರಾಷ್ಟ್ರೀಯ ರಕ್ಷಣಾ ನಿಯಮಗಳು) ಅದನ್ನು ರದ್ದುಗೊಳಿಸಬೇಕೆಂದು ಕಾಮ್ರೇಡ್ ಪಾರ್ವತಿ ಕೃಷ್ಣನ್‌ರವರು ಲೋಕಸಭೆಯ ಕಳೆದ ಅಧಿವೇಶನದಲ್ಲಿ ಮಂಡಿಸಿದ್ದ ಖಾಸಗಿ ನಿರ್ಣಯದ ಚರ್ಚೆಯು ನವಂಬರ್ 15 ರಂದು ಮುಂದರಿಯಿತು. ಹೈಕೋರ್ಟಿನ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇನ್ನಿಬ್ಬರು ಕಾರ್ಮಿಕರ ಮತ್ತು ಮಾಲಿಕರ ಪ್ರತಿನಿಧಿಗಳನ್ನೊಳಗೊಂಡ ವಿಶೇಷ ಟ್ರಿಬ್ಯೂನಲ್ ಒಂದನ್ನು ರಚಿಸಬೇಕೆಂದೂ, ಅದು ಕೇಂದ್ರದ ಸರ್ವಿಸಸ್ ರೂಲ್ಸ್, 1953ರ ಪ್ರಕಾರ, ಸರಕಾರಿ ನೌಕರರ ನಡವಳಿಕೆ ನಿಯಮಗಳ ಪ್ರಕಾರ ಮತ್ತು ಇಂಡಿಯನ್ ರೈಲ್ವೆ ಎಸ್ಟಾಬ್ಲಿಷ್‌ಮೆಂಟ್ ರೋಡ್‌ಗಳ ಪ್ರಕಾರ ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟವರ, ತೆಗೆದು ಹಾಕಲ್ಪಟ್ಟವರ ಮತ್ತು ಸಸ್ಪೆಂಡ್ ಮಾಡಲ್ಪಟ್ಟವರ ಕೇಸ್‌ಗಳನ್ನೆಲ್ಲ ವಿಮರ್ಶಿಸಬೇಕೆಂದು ಈ ನಿರ್ಣಯದಲ್ಲಿ ತಿಳಿಸಲಾಗಿದೆ.

ಎ. ಕೆ. ಗೋಪಾಲನ್‌ರವರು ಈ ನಿರ್ಣಯದ ಮೇಲೆ ಮಾತಾಡುತ್ತಾ ಈ ರೂಲ್ಸ್‌ಗಳ ದುರುಪಯೋಗವಾಗುತ್ತಿದೆ ಎಂದುಆರೋಪಿಸಿದರು. ರೈಲ್ವೆ ಮತ್ತು ಅಂಚೆ ಇಲಾಖೆಗಳಲ್ಲಿ ಹಲವು ನೌಕರರನ್ನು ಯಾವ ಕಾರಣವೂ ಇಲ್ಲದೆ ಕೆಲಸದಿಂದ ತೆಗೆದು ಹಾಕಲಾಗಿದೆಂದೂ, ಯಾವ ಆರೋಪಗಳೆಂಬುದಾಗಲಿಅವುಗಳಿಗೆಆಧಾರವೇನಾದರೂ ಇದೆಯೇ ಎಂಬುದಾಗಲಿ ತಿಳಿಸಲು ಅವರಿಗೆ ಅವಕಾಶವನ್ನೇ ಕೊಡಲಾಗುತ್ತಿಲ್ಲವೆಂದೂ ತಿಳಿಸಿದರು. ಈ ನಿಯಮಗಳು ಘಟನೆಯ 19 ನೇ ಸೆಕ್ಷನ್‌ಗೆ ವಿರೋಧವಾಗಿದ್ದು ವಾಕ್ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯಗಳಿಗೆ ಧಕ್ಕೆ ತರುವಂತಹುದಾಗಿದೆ ಎಂದೂ ತಿಳಿಸಿದರು.

ಅನೇಕ ಸರಕಾರಿ ನೌಕರರನ್ನು, ರೈಲ್ವೆ ಮತ್ತಿತರ ಸರಕಾರಿ ಕೈಗಾರಿಕೆಗಳ ಕೆಲಸಗಾರರನ್ನು ರಾಜಕೀಯವಾಗಿ ಅವರು ಕಾಂಗ್ರೆಸ್ಸನ್ನು ಒಪ್ಪದಿದ್ದುದರಿಂದಲೂ, ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರಿಂದಲೂ ಕೆಲಸದಿಂದ ತೆಗೆದು ಹಾಕಲಾಗಿದೆಂದು ಉದಾಹರಣೆಗಳನ್ನು ಕೊಟ್ಟು ಹೇಳಿದರು. ಕಮ್ಯೂನಿಸ್ಟ್ ಪಾರ್ಟಿಯ ಸಭೆಗಳಿಗೆ ಹೋಗುತ್ತಿದ್ದನೆಂಬ ಕಾರಣವನ್ನು ತೋರಿಸಿ ರೈಲ್ವೆ ನೌಕರನೊಬ್ಬನನ್ನು ಕೆಲಸದಿಂದ ತೆಗೆದು ಹಾಕಲಾಗಿದೆಂದು ಹೇಳಿದರು. ಲೋಕಸಭೆಯ ಸದಸ್ಯರಿಗಾಗಲಿ, ಅಸೆಂಬ್ಲಿ ಸದಸ್ಯರುಗಳಿಗಾಗಲಿ ಸರಕಾರಿ ನೌಕರರು 'ವೈಯಕ್ತಿಕ'ವಾಗಿ ಮನವಿಗಳನ್ನು ಕೊಡಬಾರದೆಂದು ರೈಲ್ವೆಯವರು ಸರ್ಕ್ಯುಲರ್‌ನ್ನು ಹೊರಡಿಸಿದ್ದಾರೆಂದೂ ತಿಳಿಸಿದರು.

ರಾಷ್ಟ್ರೀಯ ರಕ್ಷಣೆಯ ಹೆಸರಲ್ಲಿ ಟ್ರೇಡ್ ಯೂನಿಯನ್ ಚಳುವಳಿಯನ್ನು ಮಟ್ಟಹಾಕಲುಪ್ರಯತ್ನನಡೆದಿದೆಂದುಗೋಪಾಲನ್ ರವರು ಆರೋಪಿಸಿದರು. ಇತರ ರಾಜಕೀಯ ಅಭಿಪ್ರಾಯದವರ ವಿರುದ್ಧ ಈ ನಿಯಮಗಳನ್ನು ಉಪಯೋಗಿಸಲಾಗುತ್ತಿದೆಂದು ಹೇಳಿದರು.

ಈಗಿನ ಮೂರು ಜನರ ಸಲಹಾ ಸಮಿತಿಯಿಂದ ಯಾವ ನ್ಯಾಯವೂ ಸಿಗುತ್ತಿಲ್ಲವೆಂದೂ ಅದರಲ್ಲಿ ಡಿಪಾರ್ಟ್‌ಮೆಂಟಿನ ಮೇಲಾಧಿಕಾರಿಯೂ, ಸಿ. ಐ. ಡಿ. ಅಧಿಕಾರಿಯೂ ಇದ್ದಾರೆಂದೂ ಹೇಳಿದರು.

ಸೆಕ್ಯೂರಿಟಿ ರೂಲ್ಸ್‌ಗಳನ್ನು ರದ್ದುಗೊಳಿಸಬೇಕೆಂದೂ ಅದು ಸಾಧ್ಯವಿಲ್ಲದಿದ್ದರೆ ಈ ನಿರ್ಣಯದಲ್ಲಿ ಹೇಳಿದಂತೆ ಒಂದು ನಿಷ್ಪಕ್ಷಪಾತವಾದ ಟ್ರಿಬ್ಯೂನಲ್ ಒಂದನ್ನು ರಚಿಸಬೇಕೆಂದೂ ಒತ್ತಾಯ ಪಡಿಸಿದ್ದಾರೆ.

ತಮಿಳುನಾಡಿನ ಸದಸ್ಯರಾದ ಕೆ. ಟಿ. ಕೆ ತಂಗಮಣಿಯವರು ಮಾತಾಡುತ್ತಾ ಹೈಕೋರ್ಟಿನವರು ಕೆಲವು ಸಂದರ್ಭಗಳಲ್ಲಿ ಕೆಲಸದಿಂದ ತೆಗೆದು ಹಾಕಲ್ಪಟ್ಟ ನೌಕರರು ನಿರಪರಾಧಿಗಳೆಂದು ತೀರ್ಮಾನಿಸಿದರೂ ಅಧ್ಯಕ್ಷರಿಂದ ಹೊಸ ಆಜ್ಞೆಗಳನ್ನು ಹೊರಡಿಸಿ ಯಾವ ಅಪೀಲಿಗೂ ಅವಕಾಶವಿಲ್ಲದಂತೆ ಮಾಡಲಾಗುತ್ತಿದೆಂದೂ ಹೇಳಿದರು. ಒಬ್ಬ ಕೆಲಸಗಾರ ಒಂಭತ್ತು ವರ್ಷದಿಂದಲೂ ಸಸ್ಪೆನ್‌ಷನ್‌ನಲ್ಲೇ ಇದ್ದಾನೆಂದೂ ತಿಳಿಸಿದರು.

ರೇಣು ಚಕ್ರವರ್ತಿ ಮತ್ತು ಟಿ. ಸಿ. ಎನ್. ಮೆನನ್‌ರವರೂ ನಿರ್ಣಯಕ್ಕೆ ಬೆಂಬಲ ಕೊಟ್ಟು ಮಾತಾಡಿದರು.

ರೈಲ್ವೆ ಮಂತ್ರಿ ಜಗಜೀವನ್‌ರಾಂರವರು ಮಾತಾಡುತ್ತಾ ಸಂಬಂಧಪಟ್ಟ ನೌಕರರ ಪ್ರಶ್ನೆಗಳನ್ನು ವಿಮರ್ಶಿಸಲಾಗುತ್ತಿದೆಂದೂ ಅವಶ್ಯ ಕಂಡಲ್ಲಿ ರೂಲ್ಸ್‌ಗಳ ತಿದ್ದುಪಡಿಯನ್ನು ಮಾಡಲಾಗುವುದೆಂದೂ ಆಶ್ವಾಸನೆಯನ್ನಿತ್ತರು.

ಇದನ್ನು ವಿರೋಧಿಸಿ ಮಾತಾಡಿದ್ದು ಮಂಗಳೂರಿಂದ ಆರಿಸಿ ಹೋದ ಕಾಂಗ್ರೆಸ್ ಸದಸ್ಯ ಕೆ. ಆರ್. ಆಚಾರ್‌ರವರೊಬ್ಬರೆಂಬುದು ಗಮನಾರ್ಹವಾಗಿದೆ. ದಕ್ಷ ಆಡಳಿತೆಯ ದೃಷ್ಟಿಯಿಂದ ಇದು ಅಗತ್ಯವೆಂದು ಅವರು ವಾದಮಾಡಿ ಕಾರ್ಮಿಕರಿಗೆ ದ್ರೋಹವೆಸಗಿದ್ದಾರೆ.

ರಾಜ್ಯ ಸಭೆಯಲ್ಲಿ ಭೂ ಸುಧಾರಣೆ ಒತ್ತಾಯ

ಈಗಿನ ಭೂಸುಧಾರಣೆಯ ಪ್ರಗತಿಯು "ನಿಧಾನ ಮತ್ತು ಅವ್ಯವಸ್ಥಿತ"ವಾಗಿದೆಂದೂ ದ್ವಿತೀಯ ಯೋಜನೆಯ ಭೂಸುಧಾರಣಾ ಶಿಫಾರ್ಸುಗಳನ್ನು ಜಾರಿಗೆ ತರಲು ಕೇಂದ್ರ ಸರಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದೂ ಕಮ್ಯೂನಿಸ್ಟ್ ಸದಸ್ಯ ವಿ. ಪ್ರಸಾದ ರಾಯರ ನಿರ್ಣಯವು ರಾಜ್ಯಸಭೆಯಲ್ಲಿ ತಾ 22ರಂದು ಚರ್ಚೆಗೆ ಬಂದಿತ್ತು. ಈ ನಿರ್ಣಯಕ್ಕೆ ಸಭೆಯ ಎಲ್ಲ ಪಕ್ಷಗಳಿಂದಲೂ ಬೆಂಬಲ ದೊರೆತ್ತು.

ನಿರ್ಣಯವನ್ನು ಮಂಡಿಸುತ್ತಾ ವಿ. ಪ್ರಸಾದ ರಾಯರು ಭೂಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ರಾಜ್ಯ ಸರಕಾರಗಳು ಹಿಂಜರಿಯುತ್ತಿವೆಂದು ಯೋಜನಾ ಮಂತ್ರಿಯವರೇ ಒಪ್ಪಿಕೊಂಡಿರುತ್ತಾರೆಂದು ಹೇಳಿದರು. ಭೂಸುಧಾರಣೆಯು ನಿಧಾನವಾಗಿರುವುದಲ್ಲದೆ, ರೈತರಿಗೆ ಭೂಮಿಯ ಮೇಲೆ ಭದ್ರತೆ ಕೊಡುವ ಬದಲು ಈ ಶಾಸನಗಳ ಪರಿಣಾಮವಾಗಿ ಲಕ್ಷಾಂತರ ರೈತರನ್ನು ಒಕ್ಕಲೆಬ್ಬಿಸಲಾಗಿದೆಂದೂ ತಿಳಿಸಿದರು.

ಹೈದರಾಬಾದಿನಲ್ಲಿ, 1951—52ರಲ್ಲಿ 26,900 ಎಕ್ರೆಯಲ್ಲಿ 211,000 ಸುರಕ್ಷಿತ ಗೇಣಿದಾರರಿದ್ದರು. 1953—55 ರಲ್ಲಿ ಸುರಕ್ಷಿತ ಗೇಣಿ ರೈತರ ಸಂಖ್ಯೆ 90, 279ಕ್ಕೆ ಇಳಿಯಿತು. ಸುರಕ್ಷಿತ ಗೇಣಿ ರೈತರ ಪರಿಸ್ಥಿತಿಯೇ ಹೀಗಾದರೆ ಉಳಿದ ರೈತರ ಪರಿಸ್ಥಿತಿ ಏನಾಗಿರಬಹುದೆಂದು ಊಹಿಸಬಹುದು. ಗೋಖಲೆ ಸಂಸ್ಥೆಯವರ ವರದಿಯಲ್ಲಿ ಮುಂಬಯಿ ಗೇಣಿಶಾಸನದಲ್ಲಿ ಗೇಣಿದಾರರಿಗೆ ಕೊಟ್ಟ ರಕ್ಷಣೆ ವಿಫಲವಾಗಿದೆಂದು ತಿಳಿಸಲಾಗಿದೆ. ಪರಮಾವಧಿ ಹಿಡುವಳಿ ನಿರ್ಣಯವೂ ಕಾಲ್ಪನಿಕವಾಗಿಯೇ ಉಳಿದಿದೆ.

"ಬಿನಾಯ" ವರ್ಗಾವಣೆಗಳನ್ನೂ, ಜಮಿನು ವಿಭಜನೆಯನ್ನೂ ಕೂಡಲೇ ತಡೆಗಟ್ಟದಿದ್ದರೆ ಪರಮಾವಧಿ ಹಿಡುವಳಿ ನಿರ್ಣಯದಿಂದ ಯಾವ ಪ್ರಯೋಜನವೂ ಆಗದು. ಆದ್ದರಿಂದ ಭೂಸುಧಾರಣಾ ಕ್ರಮಗಳನ್ನು ವಿಮರ್ಶಿಸಿ ಬೇಗನೆ ಸರಿಯಾಗಿ ಜಾರಿಗೆ ಬರುವಂತೆ ಮಾಡಲು ಕೇಂದ್ರ ಸರಕಾರ ಒಂದು ಮೇಲ್ಮಟ್ಟದ ಸಮಿತಿಯನ್ನು ನೇಮಿಸಬೇಕೆಂದು ಹೇಳಿದರು. ಇಲ್ಲದಿದ್ದರೆ ಪಂಚವಾರ್ಷಿಕ ಯೋಜನೆಯ ಯಶಸ್ವಿಗೆ ಜನತೆಯಲ್ಲಿ ಉತ್ಸಾಹ ಬರಲಾರದೆಂದು ಪ್ರಸಾದರಾಯರು ವ್ಯಕ್ತಪಡಿಸಿದರು.

ಈ ನಿರ್ಣಯದ ಮೇಲೆ ಮಾತಾಡುತ್ತಾ ಕೇರಳದ ಸದಸ್ಯರೊಬ್ಬರು ಕೇರಳ ಸರಕಾರದ ಭೂಸುಧಾರಣಾ ನೀತಿಯನ್ನು ಖಂಡಿಸಿದರು. ಆದರೆ ಕಮ್ಯೂನಿಸ್ಟ್ ಸದಸ್ಯ ಪಿ. ನಾರಾಯಣ್ ನಾಯರ್‌ರವರು ಕೇರಳ ಸರಕಾರ ರೈತರಿಗೆ ಎಷ್ಟು ಅನುಕೂಲತೆಗಳನ್ನು ಒದಗಿಸಿದೆಂದು ಅಂಕಿ ಸಂಖ್ಯೆಗಳನ್ನು ಕೊಟ್ಟು ವಿವರಿಸಿದರು. ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಅಧಿಕಾರಕ್ಕೆ ಬಂದಾಗ ಮಲಬಾರು ಜಿಲ್ಲೆಯಲ್ಲಿ 1,300 ಒಕ್ಕಲೆಬ್ಬಸುವ ಕೇಸುಗಳಿದುವೆಂದೂ, ಸರಕಾರಒಕ್ಕಲೆಬ್ಬಿಸುವುದನ್ನು ನಿಷೇಧಿಸುವ ಆಜ್ಞೆ ಹೊರಡಿಸಿ ಅದನ್ನು ತಡೆಗಟ್ಟಿದರೆಂದೂತಿಳಿಸಿದರು. ಮುಂದುವರಿದು ಕಾಂಗ್ರೆಸ್ ಮತ್ತು ಪಿ. ಎಸ್. ಪಿ. ಯವರು ಭೂಸುಧಾರಣಾ ಕ್ರಮದಲ್ಲಿ ಸಹಕರಿಸದೆ ಒಣ ವಿರೋಧ ವ್ಯಕ್ತಪಡಿಸುವುದನ್ನು ತೀವ್ರವಾಗಿ ಖಂಡಿಸಿ ಮಾತಾಡಿದರು.

ಕೇಂದ್ರದ ಉಪಮಂತ್ರಿ ಮಿಸ್ರಾರವರು ಮಾತಾಡುತ್ತಾ ಭೂಸುಧಾರಣೆಯ ಪ್ರಗತಿಯು ಸಮಾಧಾನಕರವಾಗಿದೆಂದೂ, ಭೂಸುಧಾರಣೆ ತರುವಾಗ ಅಸಮಾಧಾನಕ್ಕೆ ಎಡೆಕೊಡಬಾರದೆಂದೂ ಹೇಳಿದರು. ಆದರೂ ಕೆಲವು ರಾಜ್ಯಗಳಲ್ಲಿ ಸುಧಾರಣೆಯು ಅಸಮರ್ಪಕವಾಗಿದ್ದು ಅವುಗಳಿಂದ ರೈತರಿಗೆ ಸಾಕಷ್ಟು ಅನುಕೂಲವಾಗಿಲ್ಲೆಂದು ಮಂತ್ರಿಗಳೇ ಒಪ್ಪಿಕೊಂಡರು.

ಲೋಕಸಭೆಯ ಕಾರ್ಯ...

ಚರ್ಚೆಗೆ ಉತ್ತರ ಕೊಡುತ್ತಾ ಪ್ರಸಾದರಾಯರು ರಾಜ್ಯ ಸರಕಾರಗಳು ಭೂಸುಧಾರಣೆಗಳನ್ನು ಜಾರಿಗೆ ತರಲು ವಿಳಂಬ ಮಾಡುವುದಲ್ಲದೆ ಅದಕ್ಕೆ ವಿರುದ್ಧವಾಗಿಯೇ ವರ್ತಿಸುತ್ತಿವೆಂದು ಆರೋಪಿಸಿದರು. ಕೇಂದ್ರದ ಭೂಸುಧಾರಣಾ ಸಮಿತಿಯ ಸಲಹೆಗಳನ್ನು ಅವರು ಪಾಲಿಸುತ್ತಿಲ್ಲವೆಂದರು.

ಗೇಣಿ ಕಾನೂನುಗಳನ್ನು ಜಾರಿಗೆ ತರುವಾಗ ರೈತರಪ್ರತಿನಿಧಿಗಳ ಸಹಕಾರತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿದರು. ಭೂಮಿ ಹಂಚುವುದನ್ನು ತ್ವರಿತಗೊಳಿಸಬೇಕೆಂದರು. ಯೋಗ್ಯ ಭೂಸುಧಾರಣೆ ಜಾರಿಗೆ ಬರದಿದ್ದರೆ ಹಳ್ಳಿ ಪ್ರದೇಶದ ಆರ್ಥಿಕ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಯಾಗಲಾರದೆಂದೂ, ಆಹಾರೋತ್ಪತ್ತಿಯಲ್ಲಿ ಅಭಿವೃದ್ಧಿಯಾಗದೆಂದೂ ಹೇಳಿದರು. ಭೂಸುಧಾರಣೆಯ ಬಗ್ಗೆ ಸರಕಾರದ ಗಮನವನ್ನೆಳೆಯಲು ಈ ಚರ್ಚೆ ಸಹಕಾರಿಯಾಗಿತ್ತಲ್ಲದೆ ಬೇರೆ ಯಾವ ಪರಿಣಾಮವೂ ಆಗಲಿಲ್ಲ.

ಹಿಸಿದ್ದರೆ ಪರಿಸ್ಥಿತಿ
ತರಬಹುದಿತ್ತೆಂದರ

ನಾಯರ್‌ರವರ
ಸುಧಾರಣೆಯನ್ನು
ರ ಸಮಸ್ಯೆಯನ್ನು
ಲ್ಲವೆಂದರು. ಸರಕ
ಷ್ಟು ಗಮನ ಕೊಡ
ಯವಾಗಿದೆ.

"ಸರಕಾರದ
ಕೆಲವರು ದ್ವಿತೀಯ
ರಾಷ್ಟ್ರವೇ ಒಪ್ಪಿರು
ದಲಿಸಲು ಪ್ರಯ
ಬ ಸಂಶಯ ನಮಗ
ಳ, ಮುಖ್ಯವಾಗಿ
ಹೇಳಿಕೆಗಳನ್ನು ನ
ತ್ತು ಲೋಕಸಭೆ
ಬದಲಾವಣೆ ಮಾ
ಡು ಬರುತ್ತಿವೆ ಇ
ರಣವನ್ನೇನೂ
ರ್ಥಿಕ ಮಂತ್ರಿಯ
ಲ್ಲಿ ಹೇಳಿಕೆ ಕೊಟ್ಟ
ಯನ್ನು ಸರಕಾರವ
ಗಲಿ ಮಾನ್ಯ ಮಾ

ಪಂಚವಾರ್ಷಿಕ ಯೋಜ...

ಯೋಜನೆಯ ಮೇಲೆ ಕಳೆದ ಅಧಿವೇಶನದಲ್ಲಿ ಆರಂಭವಾದ ಚರ್ಚೆಯು ಈ ಅಧಿವೇಶನದಲ್ಲಿ ಮುಂದುವರಿಯಿತು. ಯೋಜನೆಯ ಪ್ರಮಾಣದಲ್ಲಿ ಕಡಿತ ಮಾಡಬೇಕಾದೀತೆಂಬ ಸೂಚನೆಯು ಹಿಂದಿನ ಅಧಿವೇಶನದಲ್ಲಿ ಕೊಡಲಾಗಿದ್ದರೂ ಈ ಸಲ ಸರಕಾರ ಅಧಿಕೃತವಾಗಿ ಇದನ್ನು ತಿಳಿಸಿದೆ. ಹಣದ ಮುಗ್ಗಟ್ಟಿನಿಂದ ಯೋಜನೆಯನ್ನು ಸ್ವಲ್ಪ ಮಟ್ಟಿಗೆ ಕಡಿತ ಮಾಡಬೇಕಾದೀತೆಂದು ಟಿ. ಟಿ. ಕೆ.ಯವರು ಸ್ಪಷ್ಟವಾಗಿ ತಿಳಿಸಿದ್ದಾರೆ.

ಪಂಡಿತ್ ನೆಹರೂರವರು ಮಾತಾಡುತ್ತಾ ಯೋಜನೆಯನ್ನು ಕಾರ್ಯಗತಗೊಳಿಸಲು ಬಂದಿರುವ ತೊಂದರೆಗಳನ್ನು ವಿವರಿಸಿದರು. ಆಹಾರ ಉತ್ಪಾದನೆಯ ಬಗ್ಗೆ ಮಾತಾಡುತ್ತಾ ಅಶೋಕ ಮೆಹ್ತಾ ಸಮಿತಿಯು 103 ಲಕ್ಷ ಟನ್ ಮಾತ್ರ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವೆಂಬುದನ್ನು ನೆಹರೂರವರು ಟೀಕಿಸಿ 150 ಲಕ್ಷ ಆಹಾರ ಧಾನ್ಯವನ್ನು ಹೆಚ್ಚು ಬೆಳೆಸಲು ಪ್ರಯತ್ನಿಸಬೇಕೆಂದು ಹೇಳಿದರು. ಅವರು ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದು ಹೇಳಿದ್ದಲ್ಲದೆ ಬೇರೆ ಯಾವ ರಚನಾತ್ಮಕ ಸಲಹೆಯನ್ನು ಕೊಡಲಿಲ್ಲ.

ಕಮ್ಯೂನಿಸ್ಟ್ ಪಿ. ಕೆ. ವಾಸುದೇವನ್ ನಾಯರ್‌ರವರು ಈ ಬಿಕ್ಕಟ್ಟಿಗೆ ಸರಕಾರದ ಧೋರಣೆಯೇ ಕಾರಣವೆಂದು ಹೇಳಿದರು. ವಿದೇಶಗಳಿಂದ ಸಾಮಾನುಗಳನ್ನು ಆಮದು ಮಾಡಲು ಸರಕಾರ ನಿರಾತಂಕವಾದ ಅವಕಾಶ ಕಲ್ಪಿಸಿದ್ದರಿಂದ ವಿದೇಶ ವಿನಿಮಯ ಬಿಕ್ಕಟ್ಟಿಗೆ ಸಿಕ್ಕಿದೆಂದೂ ತಿಳಿಸಿದರು. ಇದರ ಬಗ್ಗೆ ಸರಕಾರ ಎಚ್ಚರಿಕೆ ವ

ದೆ ರಾಷ್ಟ್ರೀಕರಣವ
ದೇ?

ಬ್ಯಾಂಕುಗಳನ
ರವನ್ನು ಸರಕಾರ
ಈಗಿನ ಬಿಕ್ಕಟ್ಟನ್ನು
ವಿಲ್ಲವೆಂದು ನಾಯ
ದರು.

ಯೋಜನೆಯನ
ಸಲು ಸರ್ವಪಕ್ಷ ಸ
ಲೇ ಕರೆಯಬೇಕೆಂ
ಯ ಪಡಿಸಿದರು.

ಟಿ. ಟಿ. ಕೃಷ್ಣ
ರ್ಚೆಯಲ್ಲಿ ಭಾಗವ
ಪ್ರಗತಿಯ ಬಗ್ಗೆ ಕ
ಳನ್ನು ತಿಳಿಸಿದರು.
ದಲ್ಲಿ ಯೋಜನೆಯ
4,800 ಕೋಟಿಯ
ದರು. ಸಾಮಗ್ರಿ
ರಿಂದ ಆ ಪ್ರಮಾಣ
ನೆಯನ್ನು ಪೂರೈಸ
ಕೋಟಿ ರೂಪಾಯಿ
ತೆಂದು ಹೇಳಲಾಗ
ಯವರ ಹೇಳಿಕೆ
ಪ್ರಮಾಣ ರೂ. 4
ಬೆಲೆಯ ಆಧಾರ
ಪ್ರಮಾಣ ಸುಮಾ
ಯಷ್ಟು ಕಡಿಮೆ
ಮಟ್ಟಿಗೆ ಯೋಜ
ಲಿದೆ. ಯೋಜನೆ
ಕೈಬಿಡುವುದಿಲ್ಲವೆ
ಯವರು ಭರವಸೆ

ಖೋತಾ ಬ

...ಾಪಗಳ ಅವಲೋಕನ

ಹತೋಟಿಗೆ
...ವರಿಂದು ಭೂ
...ಕಾರದೆ ಆಹಾ
...ಲು ಸಾಧ್ಯವಿ
ಬಗ್ಗೆ ಸಾಕ
ಕೋಚನೀ
...ನ್ನಿಳಗೊಂಡು
...ನೆಯ ಬಗೆ
...ಕೆಯನ್ನು ಬಿ
...ರಿಯೋ ಎಂ
...ವು ಮಂತ್ರಿಗ
ಮಂತ್ರಿಗಳ
...ಸರಕಾರ ಮ
...ನೀತಿಯನ್ನ
...ಜನೆಗಳು ಕಂ
...ರಾಷ್ಟ್ರೀಕ
...ಲ್ಲವೆಂದು ಆ
...ಯಾರ್ಕ್‌ನ
...ಧೋರಣೆ
...ಕಸಭೆಯಾ
...ನ್ನ ಮುಂ

ವಾಗುವುದೆಂದು ಕಮ್ಯೂನಿಸ್ಟ್ ಪಾರ್ಟಿಯು ಮೊದಲಿಂದಲೂ ಎಚ್ಚರಿಕೆ ಕೊಡುತ್ತಿತ್ತು. ದ್ವಿತೀಯಯೋಜನೆಯಲ್ಲಿ ಸುಮಾರು ರೂ. 1,200 ಕೋಟಿ ಖೋತಾ ಹಣ ಒದಗಿಸಲಾಗುವುದೆಂದು ಹೇಳಲಾಗಿತ್ತು. ಆದರೆ ಈಗ ಈ ಕಾಲದಲ್ಲಿ ರೂ. 900-1000 ಕೋಟಿಯಷ್ಟು ಮಾತ್ರ ಖೋತಾ ಹಣದ ಸಹಾಯ ತೆಗೆದುಕೊಳ್ಳಲಾಗುವುದೆಂದು ಅವರು ಹೇಳಿದ್ದಾರೆ. ಅದ್ಧು ಪ್ರಮಾಣವನ್ನು ಇಳಿಸಿರುವುದು ಗಮನೀಯವಾಗಿದೆ.

ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ಮೂರು ಅಂಶಗಳನ್ನು ಗಮನಿಸಲಾಗುವುದೆಂದು ಹೇಳಿದ್ದಾರೆ. (1) ಈಗ ಕೈಗೊಂಡಿರುವ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸಲಾಗುವುದು. (2) ಯೋಜನೆಯ ತಿರುಳಾದ ರೈಲ್ವೆ, ಬಂದರು, ಉಕ್ಕು, ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನು ಪೂರೈಸುವುದು (3) ವಿದೇಶೀ ಸಹಾಯ ಸಿಗುವ ತನಕ ಇತರ ಯೋಜನೆಗಳನ್ನು ಬದಿಗಿಡುವುದು. ಈ ಆಧಾರದ ಮೇಲೆ ಯೋಜನೆಯನ್ನು ಕಾರ್ಯಗತಗೊಳಿಸಲಾಗುವ

...ಮೇಲೆ ಬಿಸಿ ಚರ್ಚೆ

...ಡಲಾಗುವು
...ೀ ವ್ಯಾಪಾ
...ೊಳ್ಳದಿದ್ದರೆ
...ಲು ಸಾಧ್ಯ
...ಸ್ಪಷ್ಟಪಡಿಸಿ
...ಗತಗೊಳಿ
...ನ್ನು ಕೂಡ
...ರ್ ಒತ್ತಾ
...ುವರು ಚ
...ೋಜನೆಯ
...ಷ್ಟು ಅಂಶಗ
...ಕ ಕ್ಷೇತ್ರ
...ಣ ರೂ.
...ದು ಹೇಳಿ
...ವರಿರುವುದ
ಯೋಜ
...ದು 500
...ಬೇಕಾದೀ
...ಟಿ. ಕೆ.
...ೋಜನೆಯ
...ೂ ಈಗಿನ
...ನಿಜವಾದ
...) ಕೋಟಿ
ಅಷ್ಟರ
...ಡಿತವಾಗ
ಮಾತ್ರ
ಮಂತ್ರಿ
...ಣದುಬ್ಬರ

ದೆಂದು ಹೇಳಿದರು.

ಇದರ ಜೊತೆಗೆ ಈಗ ಹಾಕಿದ್ದ ತೆರಿಗೆಗಳಲ್ಲದೆ ಇನ್ನೂ ಹೆಚ್ಚಿನ ತೆರಿಗೆಗಳನ್ನು ಹಾಕಲಾಗುವುದೆಂದು ಎಚ್ಚರಿಸಿದ್ದಾರೆ. ಸುಮಾರು ರೂ 400 ಕೋಟಿಯಷ್ಟು ಹೊಸ ತೆರಿಗೆಗಳಿಂದ ಎತ್ತಬೇಕಾದೀತೆಂದು ಹೇಳಿದ್ದಾರೆ.

ಟಿ. ಟಿ. ಕೆ. ದೃಷ್ಟಿಯಲ್ಲಿ ಹಣದುಬ್ಬರವಿಲ್ಲವಂತೆ !

ಟಿ. ಟಿ. ಕೆ.ಯವರ ದೃಷ್ಟಿಯಲ್ಲಿ ಹಣದುಬ್ಬರವೇ ನಮ್ಮ ದೇಶದಲ್ಲಿ ಇಲ್ಲವಂತೆ. ಹಣದುಬ್ಬರದಿಂದ ಬೆಲೆಗಳು ಏರಿ ಜನತೆ ನರಳುತ್ತಿರುವಾಗ ಆರ್ಥಿಕ ಮಂತ್ರಿಯವರು ಈ ವಿಚಿತ್ರವಾದ ವಾದವನ್ನು ಹೂಡಿದ್ದಾರೆ. ವಾಸ್ತವ ಪರಿಸ್ಥಿತಿಯನ್ನು ಅವರು ಸಂಪೂರ್ಣ ಮರೆತಿರುವಂತಿದೆ.

ಯೋಜನೆಯ ಪ್ರಗತಿಗೆ ಒದಗಿರುವ ತೊಂದರೆಗಳು ಸರಕಾರದ ನೀತಿಯಿಂದಲೇ ಬಂದಿದೆಯಲ್ಲದೆ ಯೋಜನೆಯ ಪ್ರಮಾಣ ದೊಡ್ಡದಾಗಿರುವುದರಿಂದಲ್ಲವೆಂಬುದು ಸ್ಪಷ್ಟವಾಗಿದೆ. ಸರಕಾರದ ಪ್ರತಿಗಾಮಿಜನವಿರೋಧಿ ಧೋರಣೆಯಿಂದ ಯೋಜನೆಗೆ ಬೇಕಾದಹಣ ಸಿಗದಿರಲು ಕಾರಣವಾಗಿದೆ. ಈಧೋರಣೆ ಬದಲಾಗದಿದ್ದರೆ ಯೋಜನೆಗೆ ಇನ್ನೂ ಹೆಚ್ಚಿನ ಗಂಡಾಂತರ ಒದಗುವ ಸಂಭವವಿದೆ.

ಸರಕಾರದ ಈಗಿನ ಹೇಳಿಕೆಯಿಂದ ಪ್ರತಿಗಾಮಿಗಳು ಸಂತೋಷ ಪಡಬಹುದು. ಗುತ್ತೇದಾರಿ ಬಂಡವಾಳಶಾಹಿಗಳ ವರ್ತಕರೂ, ಸಾಮ್ರಾಜ್ಯಶಾಹಿಗಳ ಏಜಂಟರುಗಳೂ ಯೋಜನೆಯ ವಿರುದ್ಧ ಒಂದೇ ಸಮನೆ ಧಾಳಿ ನಡೆಸಿರುತ್ತಾರೆ. ಯೋಜನೆಯನ್ನೇ ಸಂಪೂರ್ಣ ಕೈಬಿಡಬೇಕೆಂದು ಅವರು ಒತ್ತಾಯಪಡಿಸುತ್ತಿದ್ದಾರೆ. ಯೋಜನೆಯ ಪ್ರಮಾಣವನ್ನು ಕಡಿಮೆ ಮಾಡಲು ಹೊರಟ ಸರಕಾರದ ನೀತಿಯನ್ನು ಪ್ರಜಾಪ್ರಭುತ್ವವಾದಿಗಳು ವಿರೋಧಿಸುವುದು ಅಗತ್ಯ. ಯೋಜನೆ ಯಶಸ್ವಿಯಾಗಲು ಸರಕಾರದ ಪ್ರತಿಗಾಮಿ ನೀತಿಯಲ್ಲಿ ಬದಲಾವಣೆಯಾಗಬೇಕಾದುದು ಬಹಳ ಅಗತ್ಯ.

ದೇಶದ ಹಿತದೃಷ್ಟಿಯಿಂದ ಕೂಡಲೇ ಸರಕಾರ ಸರ್ವಪಕ್ಷ ಸಮ್ಮೇಳನವನ್ನು ಕರೆದು ಸಲಹೆ ಪಡೆಯಬೇಕೆಂಬ ಕಮ್ಯೂನಿಸ್ಟ್ ಪಾರ್ಟಿಯ ಸೂಚನೆಗೆ ಎಲ್ಲರೂ ಬೆಂಬಲಕೊಟ್ಟು ಒತ್ತಾಯಪಡಿಸುವುದು ಅಗತ್ಯವಾಗಿದೆ.

ನಾಗಾ ಜನರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ

ಅಸ್ಸಾಂ ಪ್ರಾಂತದ ಗುಡ್ಡಗಾಡ ಪ್ರದೇಶದ ಭಾರತದ ಗಡಿಯಲ್ಲಿ ವಾಸಮಾಡುವ ನಾಗಾ ಜನಾಂಗಗಳ ಪ್ರಶ್ನೆಹಲವು ವರ್ಷಗಳಿಂದದೇಶದಮುಂದಿದೆ. ಇತ್ತೀಚೆಗೆಆಪ್ರದೇಶದಲ್ಲಿ ಸಶಸ್ತ್ರ ಹೋರಾಟಗಳೂ ನಡೆಯುತ್ತಿದ್ದು ನಾಗಾಜನರು ತಮಗೆ ಸ್ವಾತಂತ್ರ್ಯ ಬೇಕೆಂಬ ಬೇಡಿಕೆಯನ್ನಿಟ್ಟು ಹೋರಾಡುತ್ತಿದ್ದಾರೆ. ಇದರಲ್ಲಿ ವಿದೇಶೀಯರ ಕೈವಾಡವೂ ಇದೆಯೆಂದು ಆರೋಪಿಸಲಾಗಿದೆ ಮತ್ತು ಅದಕ್ಕೆ ಕಾರಣಗಳೂ ಇವೆ. ಈ ಸಮಸ್ಯೆಯನ್ನು ಬಗೆಹರಿಸಲು ಸರಕಾರ ಇಷ್ಟರ ತನಕ ಯಾವ ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳದೆ, ಶಸ್ತ್ರಗಳ ಮೂಲಕ ಅವರ ಹೋರಾಟವನ್ನು ಮಟ್ಟ ಹಾಕಲು ಪ್ರಯತ್ನಿಸಿ ವಿಫಲವಾಗಿದೆ. ಈಗ ಈ ನಾಗಾ ಜನರಿಗೆ ಒಂದು ಪ್ರತ್ಯೇಕ ಆಡಳಿತ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರಕಾರ ಶಾಸನ ತಂದಿದೆ.

ನಾಗಾ ಜನರ ಭಾಷೆ, ಸಂಸ್ಕೃತಿ, ಜೀವನ ವ್ಯವಸ್ಥೆ ಮುಂತಾದುವುಗಳು ಪ್ರತ್ಯೇಕವಾಗಿವೆಂಬುದು ಎಲ್ಲರಿಗೂ ತಿಳಿದ ವಿಷಯ; ಅವರನ್ನು ಇತರ ಜನತೆಯ ಒಟ್ಟಿಗೆ ಒಂದೇ ಆಡಳಿತೆಯಲ್ಲಿ ತಂದರೆ ಈ ಹಿಂದುಳಿದ ಜನಾಂಗಗಳಿಗೆ ಸಾಕಷ್ಟು ಅವಕಾಶ ದೊರೆಯಲಾರದೆಂದು ಮೊದಲಿಂದಲೇ ಸ್ಪಷ್ಟವಾಗಿತ್ತು. ತಮ್ಮ ಜೀವನ ವ್ಯವಸ್ಥೆಗೆ ಯಾವ ಧಕ್ಕೆಯೂ ಆಗದಂತೆ ನೋಡಿಕೊಳ್ಳಲು ನಾಗಾ ಜನರು ಹೋರಾಡುತ್ತಿದ್ದರು. ಬಹು ಸಂಖ್ಯಾತ ನಾಗಾ ಜನರು ಕೇಂದ್ರ ಸರಕಾರದ ನೀತಿಯನ್ನು ಈ ದೃಷ್ಟಿಯಿಂದಲೇ ವಿರೋಧಿಸುತ್ತಿದ್ದರು. ಒತ್ತಾಯದಿಂದ ಅವರನ್ನು ಶರಣಾಗತರನ್ನಾಗಿ ಮಾಡಲು ಸಾಧ್ಯವಾಗದೆ ಸರಕಾರ ಈಗ ಅವರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ಮಾಡಲು ಮುಂದೆ ಬಂದಿದೆ. ಇದಕ್ಕೆ ಎಲ್ಲ ಪಕ್ಷದವರೂ ಬೆಂಬಲ ನೀಡಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಪ್ರೊ। ಹಿರೇನ್ ಮುಖರ್ಜಿಯವರು ಮಾತಾಡುತ್ತಾ ಮಸೂದೆಗೆ ಬೆಂಬಲ ನೀಡಿದರು. ಈ ಮಸೂದೆಯು ಶೀಘ್ರವಾಗಿ ಶಾಸನವಾಗಬೇಕೆಂದೂ ಶಾಸನವನ್ನು ಜಾರಿಗೆ ತರುವಾಗ ಜಾಗರೂಕತೆಯಿಂದ ವರ್ತಿಸಬೇಕೆಂದೂ ಎಚ್ಚರಿಸಿದರು.

ನಾಗಾ ಜನರ ನಡುವೆ ಕೆಲವು ವಿದೇಶೀ ಏಜಂಟರು ಇದ್ದಾರೆಂದೂ ಅವರು ನಾಗಾಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂಬ ಬೇಡಿಕೆಯನ್ನಿಟ್ಟು ಪ್ರೇರೇಪಿಸುತ್ತಿದ್ದಾರೆಂದೂ ಹೇಳಿದರು. ಅವರಿಗೆ ಸಂಪೂರ್ಣವಾದ ಸ್ವಾತಂತ್ರ ಕೊಡಬೇಕೆಂಬ ಕೇಳಿಕೆಗೆ ಎಂದೂ ಮನ್ನಣೆ ಕೊಡಬಾರದೆಂದು ಅವರು ಹೇಳಿದ್ದಾರೆ. ಪ್ರತ್ಯೇಕ ಆಡಳಿತೆ ಕೊಡುವಾಗ ಅವರಿಗೆ ಎಲ್ಲ ರೀತಿಯ ಒಳಾಡಳಿತೆಯ ಹಕ್ಕುಗಳನ್ನು ಕೊಡಬೇಕೆಂದು ಒತ್ತಾಯಪಡಿಸಿದ್ದಾರೆ.

ನಾಗಾಜನರ ವಿಶ್ವಾಸವನ್ನು ಗಳಿಸಲು ಗಡಿಪ್ರದೇಶದಲ್ಲಿ ಶಾಂತಿ ಸ್ಥಾಪಿಸಲು ಸರಕಾರದ ಈ ಹೊಸ ಧೋರಣೆಯು ಸಹಾಯಕವಾಗುವುದೆಂದು ನಮ್ಮ ನಂಬಿಕೆ. ಆದರೆ ಈ ಶಾಸನವನ್ನು ಜಾರಿಗೆ ತರುವಾಗ ಸರಕಾರ ನಿಜವಾದ ನಾಗಾ ಜನರ ನಾಯಕರ ಮನವೊಲಿಸಿ ಅವರ ಬೆಂಬಲ ಪಡೆದು ಮುಂದರಿಯುವುದು ಅಗತ್ಯ.

— ✻ —

ಜಯ ಕೇರಳ

ತರುಣಾರುಣ ಕಿರಣೋಜ್ವಲ
ವಿಜಯಾಂಕ ವಿಲಾಸಾ
ಪರಿತೋಷಿತ ಭರತೋರ್ವರಿ
ದರ ಸುಂದರ ಹಾಸಾ
ಮಧು ಮಂಜುಲ ರಸತುಂದಿಲ
ಸುಮ ಪೇಶಲ ಗಾತ್ರಿ
ಜಯ ಕೇರಳ ಜಯ ಕೇರಳ
ಜಯ ಕೇರಳ ಧಾತ್ರಿ !

ಕಳೆಗುಂದಿದೆ ಎದೆಗೂಡೇಳು
ಕುಸುವಿದಾ ಶಾಂತಿ
ಅರಿಸಿನ ತೊಡೆದಂಗನೆಯೊಲು
ಮಿಸಿಮಿಂಚುವ ಕಾಂತಿ
ಅವಿದಾರಿತ ನವಭಾರತ
ಜನ ಭಾಗ್ಯ ವಿಧಾತ್ರಿ
ಜಯ ಕೇರಳ ಜಯ ಕೇರಳ
ಜಯ ಕೇರಳ ಧಾತ್ರಿ !

ತಳಿರೆಲೆಗಳ ಹೂದೋಟಕೆ
ನವ ಚೈತ್ರವು ಬರಲು,
ಮಲಯಾನಿಲ ಕಲಗೀತಕೆ
ಶೃತಿ ಕೋಗಿಲೆ ಇರಲು
ಜಯಕೇಲಿತ ನವಜಾಗೃತ
ಜನತಾ ಜನಯಿತ್ರಿ
ಜಯ ಕೇರಳ ಜಯ ಕೇರಳ
ಜಯ ಕೇರಳ ಧಾತ್ರಿ !

ಮಲಯಾಚಲ ತುಹಿನಾಚಲ
ಶಿಖರಗಳನು ಮಾಟ
ನರಕೋಟಿಗೆ ಹರಿಯಿಸು ನೀ
ಸಮತಾಯುಗ ಗೀತಿ,
ಶುಭದಾಯಿನಿ ಸುಖದಾಯಿನಿ
ನವಜೀವನ ಧಾತ್ರಿ
ಜಯ ಕೇರಳ ಜಯ ಕೇರಳ
ಜಯ ಕೇರಳ ಧಾತ್ರಿ !

ಕವಿ: ರಾಂಭೊಟ್ಲ ಕೃಷ್ಣಮೂರ್ತಿ, ವಿಶಾಲಾಂಧ್ರ

ಇ. ಎಂ. ಎಸ್. ರವರ ಶುಭಾಶಯಗಳು

ಕೇರಳದ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್. ನಂಬೂದ್ರಿಪಾದ್‌ರವರು, ಕರ್ನಾಟಕ ಪ್ರಾಂತ ರೈತ ಸಮ್ಮೇಳನಕ್ಕೆ ಶುಭವನ್ನು ಕೋರಿ, ಕರ್ನಾಟಕದ ರೈತರ ಐಕ್ಯತೆಗೆ ಅದು ನಾಂದಿಯಾಗಲೆಂದು ಹಾರೈಸಿದ್ದಾರೆ.

ಕರ್ನಾಟಕದ ಹಿರಿಯ ನಾಯಕ ಹಾವೇರಿಯ ಶ್ರೀ ಸಿದ್ದಪ್ಪ ಹೊಸಮನಿಯವರು, ಸಮ್ಮೇಳನಕ್ಕೆ ಬರಲು ಸಾಧ್ಯವಾಗದುದಕ್ಕೆ ವಿಷಾದ ವ್ಯಕ್ತಪಡಿಸಿ, ಸಮ್ಮೇಳನವು ಯಶಸ್ವಿಯಾಗಲೆಂದು ಬಯಸಿದ್ದಾರೆ.

ಕೇರಳ ಕರ್ಷಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎ. ಕೆ. ಕೇರಳೀಯನ್‌ರವರು ಜತ್ತಿ ಸಮಿತಿಯ ವರದಿಯನ್ನು ವಿಮರ್ಶಿಸಿ, ಪ್ರಗತಿಶೀಲ ಭೂಸುಧಾರಣೆಗೆ ರೈತರು ಸಂಘಟಿತ ಚಳವಳಿ ನಡೆಸುವ ಅವಶ್ಯಕತೆಯನ್ನು ಒತ್ತಿ ಹೇಳಿ, ಸಮ್ಮೇಳನಕ್ಕೆ ಶುಭವನ್ನು ಕೋರಿದ್ದಾರೆ.

—ಹರಿಹರದ ಕಿರ್ಲೋಸ್ಕರ್ ಕಾರ್ಮಿಕ ಸಂಘದ ಕಾರ್ಯದರ್ಶಿಯವರೂ, ಉಡುಪಿಯ ನೇಕಾರ ಸಂಘದ ಕಾರ್ಯದರ್ಶಿಯವರೂ ಸಮ್ಮೇಳನಕ್ಕೆ ಯಶಸ್ಸಾಗಲೆಂದು ಹಾರೈಸಿ ಸಂದೇಶ ಕಳುಹಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿ

ಸಮ್ಮೇಳನವು ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಈ ಕೆಳಗಿನ ಕಾರ್ಯಕಾರಿ ಸಮಿತಿಯನ್ನು ಆರಿಸಿತು:

ಕೋಲಾರದ ಶ್ರೀ ಪಿ. ವೆಂಕಟಗಿರಿಯಪ್ಪ (ಅಧ್ಯಕ್ಷ), ಮಂಗಳೂರಿನ ಶ್ರೀ. ಎ. ಕೃಷ್ಣಸೆಟ್ಟಿ ಮತ್ತು ಗುಲ್ಬರ್ಗದ ಶ್ರೀ ಶರಣಪ್ಪ ಭೈರಿ (ಉಪಾಧ್ಯಕ್ಷರು), ಶ್ರೀ. ಬಿ. ವಿ. ಕಕ್ಕಿಲ್ಲಾಯ (ಪ್ರಧಾನ ಕಾರ್ಯದರ್ಶಿ), ಬೆಂಗಳೂರಿನ ಶ್ರೀ. ರಾಮಭದ್ರಯ್ಯ ಮತ್ತು ಮೈಸೂರಿನ ಶ್ರೀ. ಎನ್. ಎಂ. ಉಗ್ರಪ್ಪ (ಉಪಕಾರ್ಯದರ್ಶಿಗಳು) ತುಮಕೂರಿನ ಶ್ರೀ ಕೆ. ವಿ. ಕೃಷ್ಣಸ್ವಾಮಿ (ಕೋಶಾಧಿಕಾರಿ), ಶ್ರೀಗಳಾದ ನಂಜುಂಡಗೌಡ, ಅಪ್ಪಸ್ವಾಮಿರೆಡ್ಡಿ, ಸಂಜೀವ ರೈ, ಎನ್. ಎಲ್. ಉಪಾಧ್ಯಾಯ, ವೈ. ಟಿ. ಆಯ್ಯಪ್ಪ, ಎ. ತಿಪ್ಪಯ್ಯ, ಬಿ. ನಾರಾಯಣ ರೆಡ್ಡಿ, ಮುನಿರಾಮಯ್ಯ, ಬಿ. ಟಿ. ವಿ. ರಾಜಣ್ಣ, ಪಿ. ನಾರಾಯಣ, ತಿರುಮಲಪ್ಪ, ಬೋರೆಗೌಡ (ಸದಸ್ಯರು).

ಸಮ್ಮೇಳನಕ್ಕೆ ದಕ್ಷಿಣ ಕನ್ನಡ, ಮೈಸೂರು, ಕೊಡಗು, ತುಮಕೂರು, ಹಾಸನ, ಮಂಡ್ಯ, ಶಿವಮೊಗ್ಗ, ಬೆಂಗಳೂರು, ಕೋಲಾರ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಧಾರವಾಡ ಜಿಲ್ಲೆಗಳಿಂದ ಒಟ್ಟು 256 ಪ್ರತಿನಿಧಿಗಳು ಬಂದಿದ್ದು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಆತ ಕುಂಟನಾಗಿದ್ದರಿಂದಲೇ ಸಿಕ್ಕಿಬಿದ್ದ. ಇಲ್ಲದಿದ್ದರೆ ಯಾರ ಕೈಗೂ ಸಿಗುತ್ತಿರಲಿಲ್ಲ. ಕೈ ಕೆಲಸವನ್ನು ಬಹಳ ನಾಜೂಕಿನಿಂದ ನಡೆಸಿತ್ತು. ಹುಷಾರಿಯಿಂದ ಜೇಬಿನೊಳಗಿನ ಪಾಕೀಟನ್ನು ಹಾರಿಸಿತ್ತು. ಮುಂದೆನಿಂತಿದ್ದವನ ಜೇಬು ಖಾಲಿಯಾಯಿತು. ಟ್ರಾಮ್ ಹತ್ತಲು ನಾ ಮುಂದು—ತಾ ಮುಂದೆಂದು ನುಗ್ಗುತ್ತಿರುವ ಆ ಜನಜಂಗುಳಿಯ ಮಧ್ಯದಲ್ಲಿ ಸಿಕ್ಕಿ ಬೀಳುವುದು ಅಸಂಭವವೇ ಆಗಿತ್ತು. ಸಾಯಂಕಾಲದ ಆರು ಗಂಟೆಯ ಸಮಯಬೇಟೆಗೆ ಡಾಲ್ ಹೌಸಿ ಚೌಕದಂತಹ ಯೋಗ್ಯವಾದ ಸ್ಥಳ, ಕಲ್ಕತ್ತಾ ನಗರದಲ್ಲಿ ಇನ್ನೆಲ್ಲಿದೆ!

ಕೇವಲ ಒಂದೆರಡು ಕ್ಷಣ ಅವಕಾಶ ದೊರೆಯುತ್ತಿದ್ದರೆ, ಟ್ರಾಮಿನಿಂದ ಅವನು ಇಳಿದು ಹೋಗುತ್ತಿದ್ದ. ಆ ಮೇಲೆ...ಕಲ್ಕತ್ತೆಯ ಉನ್ಮತ್ತ, ಅಸ್ತ-ವ್ಯಸ್ತ ಜನ ಸಮೂಹದಲ್ಲಿ ಆತನನ್ನು ಹುಡುಕಲು ಬ್ರಹ್ಮನಿಗೂ ಸಾಧ್ಯವಾಗುತ್ತಿರಲಿಲ್ಲ.

ಆಗ. . . ಲಾಲಾಜಿಯ ಶರಾಬುಖಾನೆ! ಮೊದಲಿನ ನಾಲ್ಕಾರು ಬಾಟ್ಲಿಯ ಹಣ ಬಾಕಿ ಉಳಿದಿದೆ. ಎಲ್ಲಾ ತೀರಿಸಿ, ಮನಪೂರ್ತಿಯಾಗಿ ಕುಡಿಯುತ್ತಿದ್ದ. ಕಲ್ಕತ್ತ ನಗರದ ಮೇಲೆ ರಾತ್ರಿಯ ಅಂಧಕಾರ ಹರಡಿದಾಗ! ಕೊಳಕು ವಾಸನೆ ತುಂಬಿದ ಗಲ್ಲಿಯಲ್ಲಿ, ದೀಪ ಕಂಬದ ಕೆಳಗೆ ಸಿಡುಬಿನ ಕಲೆ ತುಂಬಿದ ಮುಖದ ಮೇಲೆ ಅಗ್ಗ ಬೆಲೆಯ ಪೌಡರ್ ಬಳಿದು ಗಿರಾಕಿಗಳ ಪ್ರತೀಕ್ಷೆಯಲ್ಲಿ ಮೆಹರ್ ಜಾನ್ ನಿಂತಿರುತ್ತಾಳೆ. ಅಲ್ಲಿಯ ತನಕ ಹೇಗೂ ತೂರಾಡುತ್ತಾ ಸೇರುತ್ತಿದ್ದ. ಆ ಮೇಲೆ ಒಂದು ರಾತ್ರಿ ಕಳೆದು ಹೋಗುತ್ತಿತ್ತು.

ಕಲ್ಪನೆಯ ಅರಮನೆ ರೂಪುಗೊಳ್ಳುವುದಕ್ಕೆ ಮೊದಲೇ, ಆಕಸ್ಮಿಕವಾಗಿ ಚೂರು—ಚೂರಾಗಿ ಹೋಯಿತು.

ಟ್ರಾಮ್ ಜೋರಾಗಿ ಓಡುತ್ತಿತ್ತು, ಎಡಗೈ ಪಾಕೀಟನ್ನು ಚತುರತೆಯಿಂದ ಹಾರಿಸಿತ್ತು. ಆದರೆ ಹೆಂಗಸರ ಸೀಟಿನಲ್ಲಿ ಕುಳಿತು ಧ್ಯಾನಮಗ್ನನಾಗಿ ಸಿಗರೇಟು ಸೇದುತ್ತಿದ್ದ ಹುಡುಗ ಒಮ್ಮಿಂದೊಮ್ಮೆಲೇ ಕೂಗಿದ—ಹಿಡಿಯಿರಿ! ಹಿಡಿಯಿರಿ! ಜೇಬುಕಳ್ಳ!......

—ಎಲ್ಲಿ? ಯಾರು? ಏನು! ಹಿಡಿಯಿರಿ ಗುಲ್ಲೆದ್ದಿತು. ಸರಪಳಿಯನ್ನು ಯಾರೋ ಎಳೆದರು. ಗಾಡಿ ನಿಂತಿತು.

ಆತ ಟ್ರಾಮ್ ನಿಲ್ಲುವುದಕ್ಕೆ ಮೊದಲೇ ಕೆಳಗೆ ನೆಗೆದ. ಜೊತೆಯಲ್ಲೇ ನಾಲ್ಕಾರು ಮಂದಿ ಆತನ ಮೇಲೆರಗಿದರು. ಬುಲಾಕಿ ರಾಮ್ ಸಿಕ್ಕಿಬಿದ್ದ.

ಪಾಕೀಟಿನ ಮಾಲಿಕ ಓಡಿ ಪಾಕೀಟನ್ನು ಕೈಗೆತ್ತಿಕೊಂಡ. ಆತ ಕತ್ತಿನ ತನಕ ಮುಚ್ಚಿದ್ದ ಕೋಟನ್ನು ಧರಿಸಿದ್ದ. ಯಾವುದೋ ವಿದೇಶಿ ಕಂಪೆನಿಯ ಗುಮಾಸ್ತನಂತೆ ಕಾಣುತ್ತಿದ್ದ.

ಭಯದಿಂದ ಮುಖ ಬಿಳುಪೇರಿ ಹೋಗಿತ್ತು.

— ಅಯ್ಯೋ ದೇವರೆ! ಈ ಲಫಂಗ ಐದು ನೂರು ರೂಪಾಯಿಗಳಿಗೆ ಕೈಹಾಕಿದನಲ್ಲ!

— ಮೊದಲು ಪಾಕೀಟು ನೋಡಿ, ರೂಪಾಯಿಗಳೆಲ್ಲಾ ಸರಿಯಾಗಿವೆ ತಾನೆ?— ನಡುಗುವ ಕೈಗಳಿಂದ ಪಾಕೀಟನ್ನು ತೆರೆದು ನೋಡಿದ. ನೋಟುಗಳೆಲ್ಲಾ ಇದ್ದಹಾಗೆ ಇದ್ದುವು.

ಬುಲಾಕಿ ಏನೋ ಹೇಳಲು ಬಾಯಿ ತೆರೆದ, ಆದರೆ ನಾಲ್ಕು ಕಡೆಯಿಂದಲೂ ಹೊಡೆತ ಬೀಳುತ್ತಿತ್ತು. ನೆಲದ ಮೇಲೆ ಉರುಳಿ ಎಲ್ಲವನ್ನೂ ಸಹಿಸುತ್ತಾ ಇದ್ದ. ಇಷ್ಟಕ್ಕೆ ಮುಗಿಯುವುದೇ? ಇಲ್ಲ, ಪೋಲಿಸ್ ಸ್ಟೇಶನಿನಲ್ಲಿ ಬೇರೆ ಕಾದಿದೆ. ಮೂಗಿನಿಂದ ರಕ್ತ ಹರಿಯುತ್ತಿತ್ತು.

ಆತ ಸ್ವಲ್ಪ ದಯಾಳುವೆಂದು ಕಾಣುತ್ತದೆ:

— ಬಿಡಿ, ಹಾಳಾಗಿ ಹೋಗಲಿ ಬಿಡಿ. ಪಾಕೀಟು ಸಿಕ್ಕಿತಲ್ಲ ಇನ್ನೇಕೆ? ಬಿಡಿ—ಎಂದ.

ಘಂಟೆ ಬಾರಿಸುತ್ತಾ ಟ್ರಾಮ್ ಶಾಮಬಜಾರಿನ ಕಡೆ ಹೋಯಿತು.

ಬುಲಾಕಿ ತನ್ನ ಮುರದಕಾಲನ್ನು ಊರಿ ನಿಧಾನವಾಗಿ ಎದ್ದ. ಏಟು ಬಲವಾಗಿಯೇ ಬಿದ್ದಿತ್ತು. ನೋವಿನಿಂದ ಶರೀರ ಕಂಪಿಸುತ್ತಿತ್ತು.

ಲಫಂಗ!

ಹಲ್ಲು ಕಡಿಯುತ್ತಾ ಬೀಡಿ ತೆಗೆಯಲು ಜೇಬಿಗೆ ಕೈಹಾಕಿದ, ಬೀಡಿ ಇರಲಿಲ್ಲ. ಪಾಕೀಟು ಹುಡುಕುವಾಗ ಕೈಗೆ ಸಿಕ್ಕಿದ ಬೀಡಿಗಳನ್ನು ಆ ಸಜ್ಜನರು ಬೀದಿಗೆಸೆದಿದ್ದರು. ಬೀಡಿಗಿಂತಲೂ ಕಿಸೆಯಲ್ಲಿದ್ದ ಅತ್ತರಿನ ಸೀಸೆ ಒಡೆದು ಹೋದುದರ ಬಗ್ಗೆ ಅವನಿಗೆ ತುಂಬಾ ದುಃಖವಾಯಿತು. ಮೆಹರ್‌ಜಾನಳಿಗಾಗಿ ಆ ಸೀಸೆಯನ್ನು ಕೊಂಡಿದ್ದ.

ಟ್ರಾಮ್ ಹೋದ ಕಡೆ ಕೇಕ್ಕರಿಸಿ ಉಗುಳುತ್ತಾ ಪುನಃ ಹೇಳಿದ:—ಲಫಂಗ!...

ಅಕ್ಕ—ಪಕ್ಕಗಳಲ್ಲಿ ಸೇರಿದ್ದ ಜನ ಇನ್ನೂ ಚದುರಿರಲಿಲ್ಲ. ಇನ್ನೂ ಬಾಯಿಗೆ ಬಂದಂತೆ ಬಯ್ಯುತ್ತಿದ್ದರು.

ಈ ಸೂ.... ಮಕ್ಕಳು, ಬದ್ಮಾಷ್‌ಗಳು ಸಾರ್!... ಒಂದು ದಿನ ಯಾವನೋ ನನ್ನ ಪಾರ್ಕರ್ ಹಾರಿಸಿ ಹೋದ. ಈ ನಾಯಿ ಮಕ್ಕಳನ್ನು ಪೋಲೀಸರ ಕೈಗೆ ಕೊಡದೆ ಬಿಡುವುದು ತಪ್ಪು.

—ಸೂ .... ಮಗ! .... ಹರಾಮ ಕೋರ!....

ಬುಲಾಕಿಯ ರಕ್ತ ಕುದಿಯ ತೊಡಗಿತು. ಕೈಯಲ್ಲೊಂದು ಚೂರಿ ಇರುತ್ತಿದ್ದು, ಅನುಕೂಲ ಸಮಯವಾಗುತ್ತಿದ್ದರೆ—ಬುಲಾಕಿ ಅವರಿಗೆ ಉತ್ತರ ನೀಡುತ್ತಿದ್ದ. ಆದರೆ ಈಗ ಸಂದರ್ಭ ಬೇರೆ. ಸುಮ್ಮನಿರುವುದಲ್ಲದೆ ವಿಧಿ ಇಲ್ಲ.—ಜನರು ಹೋಗಿ ಬರುವ ಗಲಾಟೆಯು ಇನ್ನೂ ಕಡಿಮೆಯಾಗಿರಲಿಲ್ಲ. ರಸ್ತೆಯಲ್ಲಿ ಟ್ರಾಮ್, ಬಸ್, ರಿಕ್ಷಾ, ಟ್ಯಾಕ್ಸಿ, ಟ್ರಕ್ ಎಲ್ಲಾ ಓಡಾಡುತ್ತಿತ್ತು.

ಬುಲಾಕಿ ಕೈಬಟ್ಟೆಯಿಂದ ಮುಖ ಒರೆಸಿದ, ಕುಂಟುತ್ತಾ ಮುಂದುವರೆದ. ತಲೆ ಸುತ್ತುತ್ತಿತ್ತು. ಎಲ್ಲಾದರೂ ಕುಳಿತುಕೊಳ್ಳಬೇಕೆನಿಸುತ್ತಿತ್ತು. ಒಂದು ಕಪ್ ಟೀ ಸಿಗುವಂತಿದ್ದರೆ?

ಪರಿವರ್ತನೆ!

ಸೂರ್ಯ ಮುಳುಗಿಯಾಗಿತ್ತು, ಮರಗಳಲ್ಲಿ ಹಕ್ಕಿಗಳು ಚೀರಾಡುತ್ತಿದ್ದುವು. ಪಾರ್ಕಿನಲ್ಲಿ ಜನರ ಗುಂಪು ಇನ್ನೂ ಚದುರಿರಲಿಲ್ಲ. ಏಕಾಂತ ಬೇಕಾಗಿತ್ತು ಅವನಿಗೆ.

ಸೂ .... ಮಗ!

ಕಿವಿಯನ್ನು ಕೊರೆಯುತ್ತಿತ್ತು ಆ ಶಬ್ದ. ಬುಲಾಕಿಯ ರಕ್ತ ಉಕ್ಕುತ್ತಿತ್ತು ... ಮೀನು ಬಜಾರಿನ ಕತ್ತಲಲ್ಲಿ, ಕೈಯಲ್ಲೊಂದು ಚೂರಿ ಇರುವಾಗ ಈ ಸಜ್ಜನರು ಒಬ್ಬೊಬ್ಬರಾಗಿ ಬರುತ್ತಿದ್ದರೆ? ....

— ಲಫಂಗ!... — ಪುನಃ ಥೂಕ್ಕರಿಸಿದ.

ಮುಂದೆ ನಡೆಯಲು ಆಗಲಿಲ್ಲ. ಮುರದ ಕಾಲು ಭಾರವಾಗಿ ಎತ್ತಲಾರದಂತಾಗುತ್ತಿತ್ತು. ಒಡೆದ ಕಿಸೆಯಿಂದ ಹರಡಿದ್ದ ಅತ್ತರಿನ ಸುವಾಸನೆ ಬಟ್ಟೆಯಲ್ಲೆಲ್ಲಾ ಹರಡಿ ಮೂಗನ್ನು ತಲುಪಿ ಅವನನ್ನು ಅಣಕಿಸುತ್ತಿತ್ತು.

ಮೆಹರ್!... ಮೆಹರ್‌ಜಾನ್! ಚಿತಪುರದ ಗಲ್ಲಿ!! ದೀಪಕಂಬದ ಕೆಳಗೆ ಬೂದು ಬಣ್ಣದ ಸೀರೆಯುಟ್ಟು ಆಕೆ ಕಾಯುತ್ತಿರಬಹುದು. ತೆಳುವಾದ ಸೀರೆಯ ಒಳಗಿನಿಂದ ರಂಗಿನ ರವಕೆ ಹೃದಯದ ಉದ್ರೇಕಕ್ಕೆ ಆಹ್ವಾನವೀಯುತ್ತಿರಬಹುದು. ಮಿಣುಕು ಪ್ರಕಾಶದಿಂದ ಬೆಳಗುತ್ತಿರುವ ಮೆಹರ್‌ಜಾನಳ ಕೋಣೆ! ಬೆಂಚಿನ ಮೇಲಿರುವ ಮೃದು ಹಾಸಿಗೆ ಎರಡು ದಿಂಬುಗಳು!...

ಎಷ್ಟೋ ದಿನದಿಂದ ತಾನು ಆಕೆಗೆ ಏನೂ ಕೊಟ್ಟಿಲ್ಲ. ಪಾಪ ಬಹಳ ಕಷ್ಟದಲ್ಲಿದ್ದಾಳೆ. ವಯಸ್ಸೂ ಹೆಚ್ಚಾಗಿದೆ. ಅಗ್ಗದ ಪೌಡರಿನಿಂದ ಮುಖದ ಕಲೆಗಳನ್ನು ಮರೆಸಲಾಗುತ್ತಿರಲಿಲ್ಲ. ಗಿರಾಕಿಗಳು ಕತ್ತಲೆಯಲ್ಲಿ ಕಡ್ಡಿ ಗೀಚಿ ಮುಖ ನೋಡಿ ಬೇರೆ ಕಡೆ ಹೊರಟು ಹೋಗುತ್ತಿದ್ದರು. ಸಾಮಾನುಗಳ ದರ ಏರಿದ ಕಾಲ. ಬಹಳ ಕಷ್ಟದಿಂದ ಜೀವನ ನಿರ್ವಹಣೆಯಾಗುತ್ತಿತ್ತು. ಇಷ್ಟಿದ್ದರೂ ಎಂದೂ ಆಕೆ ಬುಲಾಕಿಯನ್ನು ತಿರಸ್ಕರಿಸಿರಲಿಲ್ಲ. ಆಕೆ ಬುಲಾಕಿಯನ್ನು ಪ್ರೀತಿಸುತ್ತಿದ್ದಾಳೆ? ಯಾರಿಗೆ ಗೊತ್ತು! ಆದರೆ ಆಕೆ ಬುಲಾಕಿಯನ್ನು ಕಂಡು ಹೆದರುತ್ತಿದ್ದುದು ನಿಜ. ಆತ ಸಿಂಹಪ್ರಾಯನಾಗಿದ್ದ. ಅವನಿಗೆ ಹೆದರೇ ಶುಶ್ರೂಶೆ ಮಾಡುತ್ತಿದ್ದಳೋ ಏನೋ!

ಮೂಲ:

ನಾರಾಯಣ ಗಂಗೋಪಾಧ್ಯಾಯ

ಅನುವಾದ: "ಶ್ರಮಜೀವಿ"

ಈಗ ಬುಲಾಕಿಗೆ ಧರ್ಮ ಸಂಕಟ! ಮೆಹರ್‌ಜಾನ್, ಆಕೆಯ ಸೀರೆ ಹರಿದು ಚಿಂದಿಯಾಗುವುದರಲ್ಲಿದೆ. ಬೆಲೆ ಏರಿಕೆಯಿಂದ ಹೊಟ್ಟೆ ತುಂಬ ಅನ್ನ ಕೂಡಾ ದೊರೆಯುತ್ತಿರಲಿಲ್ಲ. ಮುಖದ ಕೊಳಕು, ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ಈಗ ಬುಲಾಕಿ ತನ್ನಲ್ಲೇನಿರುತ್ತಿದ್ದರೂ ಆಕೆಗೆ ಕೊಡುತ್ತಿದ್ದ ಏನೂ ಇಲ್ಲ! ಕೊನೆಗೆ ಒಂದು ಸೀರೆಯಾದರೂ ಕೊಡುವೆ ಹಾಗಿದ್ದರೆ ...

ಪಾಕೀಟು ಆತನ ಕೈಸೇರಿಯಾಗಿತ್ತು. ಆಹಾ! ... ಎಷ್ಟು ಭಾರವಾಗಿತ್ತು? ಐದು ನೂರು ರೂಪಾಯಿ! ... ಬಾಪ್‌ರೇ, ಐದು ನೂರು! ಯೋಚಿಸುವಾಗಲೇ ನವಿರೇಳುತ್ತಿತ್ತು. ಅಷ್ಟು—ಹಣದಿಂದ ಏನೆಲ್ಲಾ ನಡೆಯುತ್ತಿರಲಿಲ್ಲ? ಕೈಗೆ ಬಂದ ತುತ್ತು!... ಒಬ್ಬನಿಂದಾಗಿ! ಲಫಂಗ!

ಇನ್ನು ಮುಂದುವರಿಯಲು ಆತನ ಶರೀರದಲ್ಲಿ ಶಕ್ತಿ ಇರಲಿಲ್ಲ. ಪುನಃ ಒಂದು ಬಾರಿ ಪಾರ್ಕಿನ ಕಡೆ ನೋಡಿದ. ಜನರ ಗುಂಪು ಗುಲ್ಲೆಬ್ಬಿಸುತ್ತಿತ್ತು. ಸಜ್ಜನರ ಗುಂಪು.

— ಏ ರಿಕ್ಷಾ!

ಟುನ್-ಟುನ್-ಟುನ್ ಮಾಡುತ್ತಾ ರಿಕ್ಷಾವಾಲಾ ಬಂದ.

— ಎಲ್ಲಿಗೆ?

— ರಥತಲಾ ಘಾಟ್ ಗಂಗಾ.

— ಎಂಟಾಣೆ,— ಒಂದು ಬಾರಿ ಬುಲಾಕಿಯನ್ನು ಅಡಿಯಿಂದ ಮುಡಿಯ ತನಕ ನೋಡಿ ರಿಕ್ಷಾವಾಲಾ ಹೇಳಿದ.

— ಸರಿಯಪ್ಪ ಎಂಟಾಣೆಯೇ ತೆಗೆದುಕೊಳ್ಳುವಿಯಂತೆ.

ಟುನ್ — ಟುನ್ — ಟುನ್ .... ರಿಕ್ಷಾವಾಲ ಓಡ ತೊಡಗಿದ. ಬೀಡನ್ ಸ್ಟ್ರೀಟಿನಿಂದ ಹೊರಟ. ರಸ್ತೆಯಲ್ಲಿ ತಿಂಡಿ ಬೇಯಿಸುವವರ ಒಲೆಗಳಿಂದ ಹೊರಟ ಹೊಗೆಯಿಂದ ಆಕಾಶವೆಲ್ಲಾ ಧೂಮ್ರಮಯವಾಗಿತ್ತು. ಸೆಂಟ್ರಲ್ ಎವೆನ್ಯೂ! ಇನ್ನು ಸ್ವಲ್ಪ ದೂರ ಮಸೀದಿಯ ಪಕ್ಕದಲ್ಲಿ ನುಗ್ಗಿದರೆ. ....

ಆ ಗಲ್ಲಿ! ದೀಪ ಕಂಬ!! ಬೂದು ಬಣ್ಣದ ಸೀರೆಯುಟ್ಟು ಮೆಹರ್‌ಜಾನ್ ನಿಂತಿರುತ್ತಾಳೆ!

ಟುನ್—ಟುನ್—ಟುನ್ .... ಚಿತಪುರ ರಸ್ತೆಯಲ್ಲಿ ರಿಕ್ಷಾವಾಲ ಓಡುತ್ತಿದ್ದ. ರಸ್ತೆಯ ಎರಡು ಮಗ್ಗುಲಲ್ಲೂ ಎಷ್ಟೋ ಮೆಹರ್‌ಜಾನ್ ನಿಂತಿದ್ದರು. ಅವರಲ್ಲಿ ಹೆಚ್ಚು ಕಡಿಮೆ ಎಲ್ಲರನ್ನೂ ಬುಲಾಕಿ ಅರಿತಿದ್ದ. ಅವರೂ ಆತನನ್ನು ಬಲ್ಲರು. ಗುರುತ್ತಿದ್ದರೇನಂತ, ಅವರೆಲ್ಲಾ ತನ್ನ ಮೆಹರ್‌ಜಾನ್ ಅಲ್ಲ. ಖಾಲಿ ಕಿಸೆಯ ಯಾವ ಪ್ರೇಮಿಯನ್ನೂ ಅವರು ಪ್ರೀತಿಸಲು ಸಿದ್ಧರಿರಲಿಲ್ಲ.

— ಇಳಿಯಿರಿ.

ರಿಕ್ಷಾ ರಥತಲಾ ತಲುಪಿತ್ತು. ಮುಂದುಗಡೆ ಗಂಗಾನದಿ ಹರಿಯುತ್ತಿತ್ತು.

— ಇಳಿಯಿರಿ ಗಂಗಾಜಿ ತಲುಪಿಯಾಯಿತು.

— ಸ್ವಲ್ಪ ತಾಳಪ್ಪ, ಕುಂಟ, ನಿಧಾನವಾಗಿ ಇಳಿಯುತ್ತೇನೆ.

ಮುರದ ಕಾಲನ್ನು ಮುಂದೆ ಮಾಡಿ ಬುಲಾಕಿ ಕೆಳಗಿಳಿದ, ಒಮ್ಮೆ ಶರೀರ ತೂಗಾಡಿತು. ಆದರೆ ಆತ ಬೀಳಲಿಲ್ಲ. ಸಜ್ಜನರು ಹೊಡೆ ಹೊಡೆದು ಕೈಕಾಲು ಮುರಿದು ಹೋಗುವಂತೆ ಮಾಡಿದ್ದರು. ರಿಕ್ಷಾವಾಲನಿಗೆ ಅದೆಲ್ಲಿಂದ ಎಂಟಾಣೆ ತೆಗೆದು ಕೊಟ್ಟನೋ ಆತ ಹಣ ಪಡೆದು ಹೊರಟು ಹೋದ.

ಎದುರಿಗಿದ್ದ ಗಂಗಾನದಿಯಿಂದ ತಂಗಾಳಿ ಬೀಸುತ್ತಿತ್ತು. ಗಾಳಿಯಲ್ಲಿ ಚಳಿಯ ಕಂಪನವಿತ್ತು. ಬುಲಾಕಿಗೆ ಅದೇ ಬೇಕಾಗಿತ್ತು. ಹಸಿದವನಂತೆ ತಂಗಾಳಿಗೆ ಮೈಯೊಡ್ಡಿದ. ತಲೆಗೇರಿದ ಬಿಸಿ ಕ್ಷಣದಲ್ಲಿ ಸ್ವಲ್ಪ ಸುಧಾರಿಸಿದಂತಾಯಿತು.

ಬುಲಾಕಿ ಮೆಟ್ಟಲಿಳಿದು ದಡಕ್ಕೆ ಹೋದ. ನದಿಯಲ್ಲಿ ಉಬ್ಬರವಿತ್ತು.

ಗಂಗೆಯ ನೀರಿನಲ್ಲಿ ಕೈ ಇಕ್ಕುತ್ತಲೇ ಅವನ ಶರೀರ ಆನಂದದಿಂದ ಪುಲಕಿತವಾಯಿತು. ಸ್ವಲ್ಪ ಹೊತ್ತು ಕೈ ಆಡಿಸುತ್ತಾ ಇದ್ದು, ನಂತರ ಕೈಕಾಲು ತೊಳೆದ. ಶರೀರದ ಅರ್ಧ ಗ್ಲಾನಿಯು ಕಳೆದಂತೆನಿಸಿತು. ಅಲ್ಲೇ ತೂಕಡಿಕೆ ಆರಂಭವಾಯಿತು ಆತನಿಗೆ.

ಗಂಗೆಯ ಶೀತಲ ಜಲವೂ, ತಂಗಾಳಿಯೂ ಆತನ ಶರೀರಕ್ಕೂ ಮನಸ್ಸಿಗೂ ತುಂಬಾ ತೃಪ್ತಿಯನ್ನು ನೀಡಿದವು. ತನ್ನೆಲ್ಲಾ ನೋವು ಕ್ಷಣದಲ್ಲೇ ಕಳೆದಂತೆನಿಸಿತು; ನಿದ್ದೆ ಬರತೊಡಗಿತು. ಒಂದು ಬೀಡಿ ಸಿಗುವಂತಿದ್ದರೆ? ಅಕ್ಕ—ಪಕ್ಕದಲ್ಲಿ ಸ್ವಲ್ಪ ದೂರ ಹೋದರೆ ಪರಿಚಯದ ಅಂಗಡಿಗಳಿದ್ದುವು. ಆದರೂ ಬುಲಾಕಿಗೆ ಎದ್ದು ಹೋಗುವ ಮನಸ್ಸಾಗಲಿಲ್ಲ. ಗೋಡೆಯೊಂದಕ್ಕೊರಗಿ ಕಾಲುಗಳನ್ನು ಚಾಚಿ ಬಿದ್ದುಕೊಂಡ.

ಗಾಳಿಯಲ್ಲಿ ಅತ್ತರಿನ ಸುವಾಸನೆ ಹರಡಿ ಮೂಗನ್ನು ಕೊರೆಯುತ್ತಿತ್ತು. ಬಾಯಿಯ ಒಳಗೂ ಪ್ರವೇಶಿಸಿ ನಾಲಿಗೆಯನ್ನು ಸಿಹಿಯಾಗಿಸುತ್ತಿತ್ತು. ಪುನಃ ಆತನ ಮನಸ್ಸಿನಲ್ಲಿ ನಡೆದ ಘಟನೆಗಳೆಲ್ಲಾ ಒಂದರ—ಹಿಂದೊಂದರಂತೆ ಮರುಕ್ಕಳಿಸಿದುವು. ಮೆಹರ್‌ಜಾನ್....ಡಾಲ್ ಹೌಸ್ ಸರ್ಕಲಿನಿಂದ ಬರುತ್ತಿರುವ ಟ್ರಾಮ್ ಐದುನೂರು ರೂಪಾಯಿ .... ನೋಟ್ ....

ನಂತರ ಆತನಿಗೆ ನಿದ್ದೆ ಹತ್ತಿತ್ತು.

ರಾತ್ರಿಯ ಅಂಧಕಾರ ಹೆಚ್ಚುತ್ತಲೇ ಇತ್ತು. ನಿದ್ದೆಯಲ್ಲಿ ಬುಲಾಕಿ ಒಂದು ಕನಸ್ಸನ್ನು ಕಂಡ; ಮೆಹರ್‌ಜಾನಳ ಮನೆಯ ಮುಂದೆ ಆತ ಮತ್ತಿನಿಂದ ಸ್ಮೃತಿ ತಪ್ಪಿ ಬಿದ್ದಿದ್ದ. ಮೆಹರ್‌ಜಾನ್ ಆತನ ಅವಸ್ಥೆಯನ್ನು ನೋಡಿ ದುಃಖಿತಳಾಗುತ್ತಾಳೆ. ಒಂದು ಪಾತ್ರೆ ನೀರು ಆತನ ಮೇಲೆ ತಂದು ಸುರಿದು ಬೀಸಣಿಗೆಯಿಂದ ಗಾಳಿ ಬೀಸ ತೊಡಗುತ್ತಾಳೆ. ಚಳಿಯು ಮೈಯನ್ನು ನಡುಗಿಸಿದಾಗ ಎದ್ದು ಕುಳಿತುಕೊಳ್ಳುತ್ತಾನೆ .... ನಿಜವಾಗಿಯೂ ಆತ ಎದ್ದು ಕುಳಿತ, ನಾಲ್ಕು ಕಡೆಯೂ ನೋಡಿದ, ಅಂಧಕಾರವೇ ಅಂಧಕಾರ! ಘಂಟೆ ಎಷ್ಟಾಗಿತ್ತೋ? ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ಮೋಡಗಳು ಕಾಣ ಬರುತ್ತಿತ್ತು, ನಕ್ಷತ್ರಗಳೊಂದೂ ಕಾಣುತ್ತಿರಲಿಲ್ಲ. ಗಂಗಾನದಿಯಿಂದ ತಂಗಾಳಿ ಬೀಸುತ್ತಿತ್ತು. ಮೈಯಲ್ಲಿ ನಡುಕ ಹುಟ್ಟುವಂತಿತ್ತು. ಬುಲಾಕಿ ಕನಸಿನಲ್ಲಿ ಕಂಡಂತೆ ಶರಾಬಿನ ಮತ್ತಿನಲ್ಲಿ ಇರಲಿಲ್ಲ. ಮೆಹರ್‌ಜಾನ್ ಕೂಡ ಇರಲಿಲ್ಲ. ಸಾಯಂಕಾಲದ ಪೆಟ್ಟಿನಿಂದ ಮೈಯೆಲ್ಲಾ ಸಿಡಿದಂತೆನಿಸುತ್ತಿತ್ತು.

ಇನ್ನು ಏಳೋಣವೆಂದು ಕೈಯೂರಿ ಮೇಲೇಳುತ್ತಲೇ ಬೆಚ್ಚಿಬಿದ್ದ.

ಚತುರ್ದಿಕ್ಕು ಅಂಧಕಾರದ ಮುಸುಕಿನಲ್ಲಿತ್ತು. ಆದರೂ ಬುಲಾಕಿಯ ನಿಶೆಯಲ್ಲೂ ತೀಕ್ಷ್ಣವಾಗಿರುತ್ತಿದ್ದ ಬೆಕ್ಕಿನ ಕಣ್ಣು ಯಾವುದೋ ಮನುಷ್ಯಾಕೃತಿಯೊಂದು ಗಂಗಾನದಿಯ ಕಡೆ ಹೋಗುವುದನ್ನು ಕಂಡಿತು. ಅಳುತ್ತಿರುವ ಧ್ವನಿ! ಹೆಂಗಸಿನ ಧ್ವನಿ!

(ಮುಂದುವರಿಯುವುದು)

ಪ್ರಾಂತೀಯ ಸುದ್ದಿ ಸಂಗ್ರಹ

ಸೀಣ್ಯಾ ಗ್ರಾಮದ ರೈತ ಸಭೆ

ರಾಗಿ ಲೈಸನ್ಸ್ ರದ್ದಾಗಲಿ

ಬೆಂಗಳೂರು ಉತ್ತರ ತಾಲೂಕ. ಸೀಣ್ಯಾ ಗ್ರಾಮದ ರೈತರ ಸಮ್ಮೇಳನವು ಶ್ರೀ ಎಸ್. ಕದಂಬ್ಬನವರ ಅಧ್ಯಕ್ಷತೆಯಲ್ಲಿ ಜರುಗಿತು. ಕರ್ನಾಟಕ ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತ ಭೂಸುಧಾರಣೆಯ ವಿಚಾರ, ತೆಂಗೆ ಏರಿಕೆಯ ವಿಚಾರ, ರೈತ ಸಂಘವನ್ನು ಬಲಪಡಿಸುವ ಅವಶ್ಯಕತೆಯ ವಿಚಾರವಾಗಿ ಮಾತನಾಡಿದರು. ಬೆಂಗಳೂರು ಕಾರ್ಪೊರೇಶನ್ ಲೇಬರ್ ಯೂನಿಯನ್ ಅಧ್ಯಕ್ಷ ಶ್ರೀ ಡಿ. ಎಸ್. ಶ್ರೀರಾಮುಲುರವರು ಸಮ್ಮೇಳನಕ್ಕೆ ಶುಭ ಬಯಸಿದರು.

ಗ್ರಾಸೀಣ್ಯಾಮಕ್ಕೆನಲ್ಲಿನೀರಿನವ್ಯವಸ್ಥೆಮಾಡಬೇಕು, ಗ್ರಾಮದಲ್ಲಿರುವ ಗೋಮಾಳದ ಮೂರನೆ ಒಂದು ಭಾಗವನ್ನು ಜಮೀನಿಲ್ಲ ರೈತರಿಗೆ ಉಚಿತವಾಗಿ ಹಂಚಬೇಕು, ಹರಿಜನ ಕಾಲನಿಯಲ್ಲಿ ಮನೆ ಕಟ್ಟಲು ಜಾಗವನ್ನು ಹರಿಜನರಿಗೆ ಉಚಿತವಾಗಿ ಕೊಡಬೇಕು ಎಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳು ಅಂಗೀಕರಿಸಲ್ಪಟ್ಟವು ಶ್ರೀ ರಾಜಣ್ಣನವರು ಧನ್ಯವಾದಗಳನ್ನು ಅರ್ಪಿಸಿದರು. ರೈತರು ರಾಗಿ ಮಾರಾಟ ಮಾಡಲು ಮಂಡೀಪೇಟೆಯಲ್ಲಿ ಲೇಸನ್ಸ್ ಬೇಕಾಗಿದೆ ಎಂಬ ವರದಿ ಬಂಡವಾಳಸ್ತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತೆ ಆದ್ದರಿಂದ ಇದನ್ನು ಕೂಡಲೇ ರದ್ದು ಮಾಡಬೇಕೆಂಬ ನಿರ್ಣಯಗಳು ಸ್ವೀಕೃತವಾದುವು.

ಕೋಲಾರ ಸವರನ್ ಬೀಡಿ ಫ್ಯಾಕ್ಟರಿ ಲಾಕೌಟ್ ವಿರುದ್ಧ ಮುಷ್ಕರ

ಕೋಲಾರ ನಗರದ ಪ್ರಮುಖ ಬೀಡಿ ಫ್ಯಾಕ್ಟರಿಯಾದ ಸವರನ್ ಬೀಡಿ ಫ್ಯಾಕ್ಟರಿ ಕೆಲಸಗಾರರು ನಗರದ ಇತರ ಫ್ಯಾಕ್ಟರಿಗಳಲ್ಲಿರುವಂತೆ ಸೌಲಭ್ಯಗಳನ್ನು ಕೊಡಬೇಕೆಂದು ಒತ್ತಾಯ ಪಡಿಸಿದ್ದರ ಮೇಲೆ ಈ ಫ್ಯಾಕ್ಟರಿಯ ಮಾಲಿಕರು ಕೆಲಸಗಾರರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಲಿಲ್ಲ. ಬದಲು ತಾ. 18-11-57ರಿಂದ ಫ್ಯಾಕ್ಟರಿಯನ್ನು ಮುಚ್ಚಿ ಲಾಕೌಟ್ ಮಾಡಿರುತ್ತಾರೆ. ಈ ತಾರೀಖಿನಿಂದ ಈತಹಲ್‌ವರಿವಿಗೂ ಬೀಡಿ ಕೆಲಸಗಾರರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿರುತ್ತಾರೆ.

ಇದರ ಸಂಬಂಧವಾಗಿ ತಾ. 20-11-57ರಲ್ಲಿ ಕೋಲಾರ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ ಸಯ್ಯದ್ ಗೌಸ್‌ಪೀರ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಈ ಸಭೆಯಲ್ಲಿ ಸಂಘದ ಕಾರ್ಯದರ್ಶಿ H. ಅಬ್ದುಲ್ ಮಜೀದ್‌ರವರು, ಮಾಲಿಕರು ಕೆಲಸಗಾರರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸದೆ ಲಾಕೌಟ್ ಮಾಡಿರುವುದರ ವಿರುದ್ಧ ಹೋರಾಡಿ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಬೇಕೆಂದರು.

ನಂತರ ಪಿ. ವೆಂಕಟ ಗಿರಿಯಪ್ಪ, ಜಿ. ನಾರಾಯಣಸ್ವಾಮಿ ಮುಂತಾದವರು ಮಾತನಾಡಿ ಈ ಫ್ಯಾಕ್ಟರಿ ಮಾಲಿಕರು ಕೂಲಿಗಾರರ ನ್ಯಾಯವಾದ ಬೇಡಿಕೆಗಳನ್ನು ಕೊಡಬೇಕೆಂದೂ, ಆರು ದಿನಗಳಿಂದ ನಿರುದ್ಯೋಗಿಗಳಾಗಿ ಉಪವಾಸದಿಂದ ನರಳುತ್ತಿರುವ ಕೆಲಸಗಾರರಿಗೆ ಸರಕಾರ ಆದಷ್ಟು ಬೇಗ ಮುಂದೆಬಂದು ನ್ಯಾಯ ದೊರಕಿಸಿಕೊಡಬೇಕೆಂದು ಸರಕಾರವನ್ನು ಒತ್ತಾಯ ಪಡಿಸಿದರು.

ಅಧ್ಯಕ್ಷರು ಮಾತನಾಡಿ ಈ ಚಳುವಳಿಯು ನ್ಯಾಯಬದ್ಧವಾದ್ದರಿಂದ ಇತರ ಪಕ್ಷಗಳವರೂ ಈ ಚಳುವಳಿಗೆ ತಮ್ಮ ಬೆಂಬಲ ಸೂಚಿಸಬೇಕೆಂದೂ, ಮತ್ತು ಎಲ್ಲರೂ ಈ ಚಳುವಳಿಯನ್ನು ನಡೆಸಲು ಉದಾರವಾಗಿ ಧನ ಸಹಾಯ ಮಾಡಬೇಕೆಂದೂ ಕೋರಿದರು.

ಕೋಲಾರದ ಸರಕಾರಿ ಧರ್ಮಾಸ್ಪತ್ರೆಯಲ್ಲಿ ಅಕ್ರಮ

ಕೋಲಾರದ ಶ್ರೀ ಕೃಷ್ಣರಾಜೇಂದ್ರ ಸರಕಾರಿ ಧರ್ಮಾಸ್ಪತ್ರೆಯಲ್ಲಿ ನಡೆಯುತ್ತಿರುವ ಅಕ್ರಮ ಅನ್ಯಾಯಗಳು ಅತಿಯಾಗಿವೆ. ಅಧಿಕಾರಿ ವರ್ಗದ ಮೇಲಧಿಕಾರಿಯಿಂದ ಹಿಡಿದು ಎಲ್ಲರೂ ಅಕ್ರಮ ಅನ್ಯಾಯಗಳನ್ನು ಚಾಚೂ ತಪ್ಪದೆ ನೆರವೇರಿಸುತ್ತಿರುವರು.

ಉಚಿತವಾಗಿ ಜನತೆಗೆ ಕೊಡಲು ಬರುವ ಔಷದಿಗಳು ಮೆಡಿಕಲ್ ಸ್ಟೋರುಗಳ ಕೈ ಸೇರುತ್ತವೆ. ಉಚಿತ ಔಷದಿಗೆ ಸಾಮಾನ್ಯ ಜನಗಳಿಂದ ಹಣ ವಸೂಲಿ ಮಾಡುತ್ತಿರುವುದು ಶೋಚನೀಯವಾಗಿದೆ ಈ ವಿಚಾರ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿಸಲಾಗಿದೆ; ಆದರೂ ಏನೂ ಫಲಕಾರಿಯಾಗಲಿ.

ಡಾಕ್ಟರುಗಳು ಸಕಾಲಕ್ಕೆ ದೊರಕದೆ ಅನೇಕ ರೋಗಿಗಳು ವಿಮುಖರಾದುದೂ ಉಂಟು. ಈ ಅವ್ಯವಸ್ಥೆಯನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಕಾರಣವೇನೆಂದರೆ ಸ್ಥಳೀಯ ಮಾನ್ಯರೆನಿಸಿಕೊಂಡಿರುವ ಕೆಲವು ಗಣ್ಯವ್ಯಕ್ತಿಗಳ ಬೆಂಬಲ ಆಸ್ಪತ್ರೆಯ ಅಧಿಕಾರಿ ವರ್ಗಕ್ಕೆ ದೊರಕಿದೆ. ಅವರಿಗೆ ಸರ್ಕಾರದಿಂದ ಯಾವ ವಿಧವಾದ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತೇವೆಂದು ಅಭಯವನ್ನು ನೀಡಿದ ಹಾಗಿದೆ.

ರೂ. ೫೦ಕ್ಕೊಂದು ಸರ್ಟಿಫಿಕೇಟು

ಇಷ್ಟಲ್ಲದೆ ಮೋಟಾರು ಕೆಲಸಗಾರರಿಗಾಗಿ ಫಸ್ಟ್‌ಎಯಿಡ್ ಕ್ಲಾಸ್‌ಗಳನ್ನು ತೆರೆಯುತ್ತೇವೆಂದು ಹೇಳಿ ಅನೇಕರನ್ನು ಸೇರಿಸಿಕೊಂಡು ಕ್ಲಾಸುಗಳನ್ನು ತೆರೆಯದೆಯೇ ಫಸ್ಟ್‌ಎಯಿಡ್ ಸರ್ಟಿಫಿಕೇಟುಗಳನ್ನು ಒದಗಿಸುತ್ತಿದ್ದಾರೆ. ಅದೂ ಏನು ಪುಕ್ಕಟೆಯೇ? ಅಲ್ಲ, ಅದರ ಮಾಮೂಲಿ ಒಂದು ಫಸ್ಟ್‌ಎಯಿಡ್ ಸರ್ಟಿಫಿಕೇಟಿಗೆ ಕೇವಲ ರೂ. 10 ರಿಂದ 50 ರವರಿಗೆ ಪಾಪ ಕೆಲಸಗಾರರು ಏನು ತಾನೆ ಮಾಡಿಯಾರು? ಕ್ಲಾಸುಗಳಲ್ಲಿ, ಫಸ್ಟ್‌ಎಯಿಡ್ ಸರ್ಟಿಫಿಕೇಟ್ ಇಲ್ಲದಿದ್ದರೆ ಅವರ ಲೈಸನ್ಸ್ ರಿನ್ಯೂವಲ್ ಆಗೋಲ್ಲ. ಇದರಿಂದಾಗಿ ಈ ನಗರದ ಎಲ್ಲ ತರಹೆಯ ಸಾಮಾನ್ಯ ಜನರಿಗೂ ಕ್ಲಿಷ್ಟ ಪರಿಸ್ಥಿತಿ ಬಂದೊದಗಿದೆ. ಹೆಚ್ಚು ಮಾತನಾಡಿದರೆ ನಿನ್ನ ಹೆಸರು ಪಟ್ಟಿಯಲ್ಲೇ ಇಲ್ಲವೆಂದು ಹೊರದೂಡುತ್ತಾರೆ. ಈ ಆಸ್ಪತ್ರೆಯ ಅಧಿಕಾರಿಗಳ ಜನಭಂಜಕ ನೀತಿಯನ್ನು ನಿಲ್ಲಿಸಲು ಸರಕಾರಕ್ಕೆ ತಿಳಿಸಿಯೂ ಅದು ಮುಂದು ಬರದಿರುವುದನ್ನು ಕಂಡ ಜನರು ರೋಸಿ ಹೋಗಿದ್ದಾರೆ.

ಸರ್ಕಾರೀ ಆಸ್ಪತ್ರೆಗಳು ಇರುವ ಉದ್ದಿಶ್ಯ ಖಾಸಗಿ ವೈದ್ಯರಿಗೆ ಹಣ ಕೊಡಲಾರದ ಜನರಿಗೆ ಉಚಿತ ಔಷಧಿ ಒದಗಿಸುವುದಕ್ಕಾಗಿ ಆದರೆ ಕೋಲಾರದ ಆಸ್ಪತ್ರೆ ಮಾತ್ರ ಆ ಉದ್ದಿಶ್ಯದಿಂದಲ್ಲ. ಜನರನ್ನು ಸುಲಿಯುವುದಕ್ಕಾಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ನಡೆಯುವ ಅಕ್ರಮವನ್ನು ನಡೆಯಬಿಟ್ಟ ಮುನಿಸಿಪಾಲಿಟಿಯಾಗಲೀ, ತಿಳಿದು ಸುಮ್ಮಗಿರುವ ಸರ್ಕಾರವಾಗಲೀ ಇನ್ನಾದರೂ ಕಣ್ದೆರೆಯುವುದೇ?

ಕೋಲಾರ ಬೀಡಿ ಕಾರ್ಮಿಕರ ಹೋರಾಟಕ್ಕೆ ಮೋಟಾರು ಕೆಲಸಗಾರರ ಸಹಾನುಭೂತಿ

ನಗರದಲ್ಲಿ ಸವರ್ನ ಬೀಡಿ ಫ್ಯಾಕ್ಟರಿ ಕೆಲಸಗಾರರು ನಡೆಸುತ್ತಿರುವ ಚಳುವಳಿ ನ್ಯಾಯಬದ್ಧವಾದುದು. ಅವರು ಕೇಳುತ್ತಿರುವುದು ಸಾಧಾರಣ ಬೇಡಿಕೆಗಳು. ಈ ಕನಿಷ್ಠ ಬೇಡಿಕೆಗಳನ್ನು ಈಡೇರಿಸದೆ ಫ್ಯಾಕ್ಟರಿಯನ್ನೇ ಮುಚ್ಚಿ ಕೆಲಸಗಾರರಿಗೆ ಕೆಲಸ ಕೊಡದೆ ಮಾಲಿಕರು ಅನ್ಯಾಯ ಮಾಡುತ್ತಿರುವುದು ಶೋಚನೀಯವಾಗಿದೆ. ಇದನ್ನು ತಿಳಿದ ಯಾವದೇ ಕಾರ್ಮಿಕ ಸಂಘವೂ ಈ ನ್ಯಾಯಬದ್ಧ ಹೋರಾಟಕ್ಕೆ ಸಹಾನುಭೂತಿ ತೋರಿಸದೆ ಇರದು.

ಈ ದಿನ ಸವರನ್ ಬೀಡಿ ಫ್ಯಾಕ್ಟರಿ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸದೆ ಅವರಿಗೆ ತೊಂದರೆ ಕೊಡುತ್ತಿರುವ ಮಾಲಿಕರಾದ ಜಿ. ಗೌಸ್‌ರವರ ಅನೀತಿಯನ್ನು ಎ. ಎಸ್. ಕಲಂಥರ್ ಖಾನ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಕೋಲಾರ ಡಿಸ್ಟ್ರಿಕ್ಟ್ ಮೋಟಾರ್ ಕೆಲಸಗಾರರ ಸಂಘದ ಕಮಿಟಿಯು ಖಂಡಿಸಿತು. ಮತ್ತು ತಕ್ಷಣ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಿ ಫ್ಯಾಕ್ಟರಿಯನ್ನು ತೆರೆದು ಕೆಲಸಗಾರರಿಗೆ ಕೆಲಸಗಳನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ತಿಳಿಸುತ್ತದೆ.

ಸರ್ಕಾರವು ಆದಷ್ಟು ಬೇಗ ಈ ವಿಷಯದಲ್ಲಿ ಮಧ್ಯಸ್ಥಿಕೆಯನ್ನು ವಹಿಸಿ ಕೆಲಸಗಾರರ ಹಕ್ಕುಗಳಿಗೆ ಧಕ್ಕೆ ಬರದಂತೆ ಮಾಡಿ ಕೊಡಬೇಕೆಂದು ತೀರ್ಮಾನಿಸಿದೆ.

ಓದುಗರ ಓಲೆ

ಸ್ವಾಮಿ,

ನಾನು ತಾ॥ 3-5-57 ರಲ್ಲಿ ಎನ್. ಇ. ಎಸ್. ಬ್ಲಾಕಿನ ಜ್ಞಾನ ಮತ್ತು ಮನರಂಜನಾ ಕೇಂದ್ರ, ಯುವಕ ರೈತಸಂಘ, ಮಹಿಳಾ ಮಂಡಳಿ, ಇವುಗಳ 46 ಬೋರ್ಡುಗಳನ್ನು ಬರೆಯಲು 105 ರೂಪಾಯಿಗಳಿಗೆ ಒಪ್ಪಿಕೊಂಡು 15 ರೂಪಾಯಿ ಅಡ್ವಾನ್ಸ ಸಹ ತೆಗೆದುಕೊಂಡು 15 ದಿವಸಗಳಲ್ಲಿ ಪೂರೈಸಿ ಕೊಡಲು ಒಪ್ಪಿಕೊಂಡಿದ್ದೆನು. ಆರ್ಡರ್ ಪಡೆಯುವಾಗ್ಗೆ ಟೆಂಡರ್ ರೀತಿಯಲ್ಲಾಗಲಿ ಇನ್ನಾವುದೇ ರೀತಿಯಲ್ಲಿ ಸುತ್ತು ಬಳಸಿ ಹಣಪಡೆಯಲು ಸಿದ್ಧನಿಲ್ಲವೆಂದೂ ಚುಕ್ತ ಹಣ ಕೊಟ್ಟು ತೆಗೆದುಕೊಂಡು ಹೋಗುವುದಾದರೆ ಮಾತ್ರ ತಯಾರಿಸಿ ಕೊಡುತ್ತೇನೆಂದು ತಿಳಿಸಿದೆ.

ಯಾಕೆಂದರೆ ಸರ್ಕಾರದ ಹಣ ಸಿಗಲು ಎಷ್ಟು ಬಣ್ಣಪಡಬೇಕೆಂದು ನಂಗೊತ್ತು. ಅಲ್ಲದೆ, ಅಷ್ಟರವರೆಗೆ ನಮಗೆ ಹೊಟ್ಟೆ ಹೊರೆಯುವುದೇ ಒಂದು ದೊಡ್ಡ ಆಪತ್ತು. ನನ್ನ ಶರತ್ತಿಗೆ ಒಪ್ಪಿಕೊಂಡಿದ್ದರಿಂದ ಆರ್ಡರ್ ತೆಗೆದುಕೊಂಡೆ. ಈಗ ಹಣ ಕೊಡಲು ನನ್ನ ಮತ್ತು ಇನ್ನೆರಡು ಬೇರೆ ಯಾರಿಂದಲಾದರೂ ಟೆಂಡರ್ ಬಿಲ್ಲು ಮಾಡಿಸಿ ಇವುಗಳ ಜೊತೆಯಲ್ಲಿ ಸ್ಯಾಂಕ್ಷನ್ನಿಗೆ ಬಿಲ್ಲು ಹಾಕಿಸಿ ಕೊಡಬೇಕಂತೆ. ನಾನು ನಮ್ರನಾಗಿ ತಾವು ಒಪ್ಪಿ ಈ ರೀತಿ ವಿರುದ್ಧಾಚರಣೆ ಗೈಯಬಹುದೇ ಎಂದು ಕೇಳಿದ್ದಕ್ಕೆ 'ಸರ್ಕಾರಿ ಹಣ ಅಷ್ಟು ಸುಲಭವಾಗಿ ದೊರೆಯುವುದಿಲ್ಲ' ಎಂದು ಹೇಳಿ ಹೊರಟುಹೋದರು. ನಿರ್ವಾಹವಿಲ್ಲದೆ ಗುಮಾಸ್ತರ ಕಡೆ ರೂ90ರ ಬಿಲ್‌ಸಹಿತ ತಯಾರಾದ ಬೋರ್ಡುಗಳನ್ನು ಕೊಟ್ಟೆ.

ಆದರೆ ಇನ್ನೂ ನನಗೆ ಹಣ ಸಂದಿಲ್ಲ. ಕೇಳಿದರೆ ಡಿ.ಸಿ. ಯವರು ದಸ್ಕತುಗೋಸ್ಕರ ಕಳಿಸಿದ್ದೇವೆ; ಬಂದ ಕೂಡಲೇ ಕಳಿಸಿಕೊಡುತ್ತೇನೆ ಎಂದು ಉತ್ತರ ಬರೆದರು. ಪುನಃ ಬಿಲ್ ಕೇಳಲಾಗಿ, ಕಳಿಸಿಕೊಡಲಾಯಿತು. ಇಲ್ಲಿಗೆ 6 ತಿಂಗಳಾದರೂ ಇದೇ ಉತ್ತರ. ಕೇವಲ 90 ರೂಪಾಯಿಗೆ ಇಷ್ಟೊಂದು ಕಿರುಕುಳವಾದ ಮೇಲೆ, ಸರಕಾರದ ಕೆಲಸ ಮಾಡಲು ನಂಬುಗೆಯೇ ಸಾಲದಂತಾಗಿದೆ. ಆರ್ಡರ್ ಪಡೆದು 7 ತಿಂಗಳಾಯಿತು. ಇಷ್ಟರಲ್ಲಿ 300-400 ರೂಪಾಯಿ ಕೆಲಸ ಮಾಡಿಕೊಳ್ಳುತ್ತಿದ್ದೆವು. ಈ ಲುಕ್ಸಾನಕ್ಕೆ ಜವಾಬ್ದಾರರಾರು? ಲುಕ್ಸಾನು ಕೇಳಲಿಕ್ಕೆ ನಮಗೆ ಹಕ್ಕಿದೆಯೆಂದು ಕೋರ್ಟಿಗೆ ಹೋಗಲಿಕ್ಕೆ ಸಾಧ್ಯವೆ? ಇದನ್ನೆಲ್ಲಾ ಡೆವಲಪಮೆಂಟ್ ಸಾಹೇಬರಿಗೂ ತಾ 11-11-57'ರಲ್ಲಿ ಡೆಪ್ಯೂಟಿ ಕಮಿಷನರ್ ಸಾಹೇಬರಿಗೂ ಅದೇ ಕಾಪಿಯನ್ನು ಕಳಿಸಿ ಕೊಡಲಾಯಿತು. ಇನ್ನೂ ಉತ್ತರ ಸಹ ಬಂದಿಲ್ಲ ಪುನಃ ಬರೆದೆ ಅದಕ್ಕೂ ಉತ್ತರವಿಲ್ಲವೆಂದ ಮೇಲೆ ಈ ಆಫೀಸರುಗಳನ್ನು ಕೇಳುವವರು ಯಾರು ಇಲ್ಲವೆ, ನಮ್ಮ ಕಾಂಗ್ರೆಸ್ ಸರ್ಕಾರದಲ್ಲಿ ಇದೆಲ್ಲ ಮಾಮೂಲಿ! ಎಂಬ ಸಂಶಯ ಧೃಢವಾಗುತ್ತಿದೆ.

(೮ನೇ ಪುಟ ನೋಡಿ)

ತಿರುಗುಬಾಣ

ಕೃಷ್ಣ ಮೆನನರು ಕಾಶ್ಮೀರ ವಿವಾದವನ್ನು ಬಚಿಸೋಲು ಮಾಡುತ್ತಿದ್ದಾರೆ; ನಮ್ಮ ನಿರ್ಣಯಗಳನ್ನೆಲ್ಲ ಅರ್ಥಹೀನವಾಗಿಸುತ್ತಿದ್ದಾರೆಂದು ಅಮೇರಿಕ ಬಡಬಡಿಸಿದೆ.

ಇತ್ತ ಭಾರತದಲ್ಲಿ ಅಶೋಕಮೆಹ್ತಾ ಪಿ. ಎಸ್. ಪಿ.ಗಳು, ಕೃಷ್ಣಮೆನನರನ್ನು ವಿಶ್ವಸಂಸ್ಥೆಯಿಂದ ವಾಪಾಸು ಕರೆಸಿಕೊಳ್ಳಬೇಕೆಂದು ಒದರುತ್ತಿದ್ದಾರೆ.

ಆದರೆ ಅಮೆರಿಕಾದ ಆದೇಶದಂತೆ, ಅಶೋಕ ಮೆಹ್ತಾ ವರ್ತಿಸುತ್ತಿದ್ದಾರೆಂದು ಭಾವಿಸುವುದು ಶುದ್ಧ ಕುಹಕವೆಂದು ನಾವು ಸ್ಪಷ್ಟಪಡಿಸುತ್ತೇವೆ!

o o o o

ಇದೇ ಅಶೋಕ್‌ಮೆಹ್ತಾರು ಈ ಬಾರಿ ಪಾರ್ಲಿಮೆಂಟಿಗೆ ಸ್ಪರ್ಧಿಸುವಲ್ಲಿ, ಕಾಂಗ್ರೆಸ್ ವಿರೋಧ ಮಾಡುವುದಿಲ್ಲವೆಂದು ಘೋಷಿಸಿದೆ.

ಇನ್ನು ಸ್ವಲ್ಪ ಸಮಯದಲ್ಲೇ 'ಪಿ. ಎಸ್. ಪಿ.ಗೆ ಅಶೋಕ್‌ಮೆಹ್ತಾರ ರಾಜಿನಾಮೆ' "ಕಾಂಗ್ರೆಸ್ (ಎ. ಐ. ಸಿ. ಸಿ.) ಕಾರ್ಯಕಾರಿ ಸಮಿತಿಯ ತುರ್ತಿನ ಸಭೆ" ಎಂದು ದಪ್ಪಕ್ಷರಗಳಲ್ಲಿ ಪತ್ರಿಕೆಗಳು ಬರೆಯಬಹುದೆಂದು, ಪಕ್ಷ ಬದಲಾವಣೆಯ ಬಾಲ ಚಿಹ್ನೆಯ ಜ್ಞಾನವಿರುವ ದಕ್ಷಿಣಕನ್ನಡದಕಾಂಗ್ರೆಸ್‌ಎಂ.ಎಲ್.ಎ. ಒಬ್ಬರು ಹೇಳಿಕೆ ಇತ್ತಿದ್ದಾರೆಂಬುದೊಂದು ವದಂತಿ ಮಾತ್ರ!

o o o o

ಕಾಂಗ್ರೆಸ್ ಸ್ಪರ್ಧಿಸದಿರುವುದೇ ಅಲ್ಲ, ಅಶೋಕ್ ಮೆಹ್ತಾರಿಗೆ ಎಲ್ಲಾ ತೆರನ ಸಹಾಯ—ಸಹಕಾರ ನೀಡಬೇಕೆಂದು, ಕೇರಳ ಅಸೆಂಬ್ಲಿ ಕಾಂಗ್ರೆಸ್ ಗುಂಪಿನ ನಾಯಕ ಶ್ರೀ ಪಿ. ಟಿ. ಚಾಕೋರವರು, ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರಿಗೆ ಕಾಗದ ಬರೆದಿದ್ದಾರೆಂದು ಒಂದುಪುಕಾರು.

ಈ ಪುಕಾರಿಗೆ ನವೆಂಬರ 24ರಂದು ಪಿ. ಎಸ್. ಪಿ. ಯ ಪಟ್ಟಂಥಾನು ಪಿಳ್ಳೈ ಹಾಗೂ ಇದೇ ಶ್ರೀ ಚಾಕೋವರವರು, ಒಂದೇ ವೇದಿಕೆಯ ಮೇಲೆ, ಕಾಂಗ್ರೆಸ್ ಮತ್ತು ಪಿ. ಎಸ್. ಪಿ. ಜಂಟಿಯಾಗಿ ಕೇರಳದ ಕಮ್ಯೂನಿಸ್ಟ್ ಆಡಳಿತೆಯನ್ನು ವಿರೋಧಿಸಿಲುರುಳಿಸಬೇಕೆಂದು ಹೇಳಿದುದೇ ಕಾರಣವಾಗಿರಬಹುದೆ?

o o o o

"ಕಾಶ್ಮೀರ ನಮಗೊಂದು ನುಂಗಲಾರದ ತುತ್ತಾಗಿದೆ" ಎಂದು 10 ವರ್ಷಗಳಿಂದ ಕಾಶ್ಮೀರವನ್ನು ನುಂಗಲು ಪ್ರಯತ್ನಿಸುತ್ತಿರುವಬ್ರಿಟನ್-ಅಮೆರಿಕಾಗಳು ಅಸಹಾಯಕ ಹೇಳಿಕೆ ಕೊಟ್ಟಿವೆ.

ಇಷ್ಟರವರೆಗೆ ನುಂಗಬಹುದಾಗಿತ್ತೊ ಏನೊ! ಆದರೆ ರಷ್ಯಾದ 'ವಿಟೋ' ಒಂದು ಗಂಟಲಲ್ಲಿ ಸಿಕ್ಕಿಕೊಳ್ಳುವ ಮುಳ್ಳಾಗಿದೆಯಲ್ಲಾ!

ಈ ಸಂಬಂಧದಲ್ಲಿ ಗಂಟಲಲ್ಲಿ ಮುಳ್ಳು ಸಿಕ್ಕಿಕೊಂಡ ತೋಳನ ಕಥೆ ನೆನಪಾಗುತ್ತಿದೆ. ತೋಳನ ಗಂಟಲ ಮುಳ್ಳು ಕಿತ್ತ ಕೊಕ್ಕರೆಯನ್ನೇ ಅದು ಕೊಂದು ತಿನ್ನಲು ಮುಂದಾಯಿತು. ಆದರೆ ಈ ಯು. ಕೆ. ಅಮೆರಿಕಾ ತೋಳನಿಗೆ ಭಾರತ ಕೊಕ್ಕರೆಯ ರೂಪದಲ್ಲಿ ಸಹಾಯ ಮಾಡಲು ತಯಾರಿಲ್ಲವಲ್ಲಾ! ಎಂಬುದೇ ಈ ತೋಳನ ತಮ್ಮ (ಪಾಕಿಸ್ತಾನದ) ನರಿ ನೂನರ ಚಿಂತೆಯಂತೆ.

o o o o

ಕಾಶ್ಮೀರ ನುಂಗಲಾರದ ಬಿಸಿ ಕಡುಬಿನಂತಾಗಿದೆ.

ಅಂದ ಹಾಗೆ ಕಾಶ್ಮೀರದಂಥ ಶೀತಲ ಪ್ರದೇಶವನ್ನು ನುಂಗಲಾರದಷ್ಟು ಬಿಸಿಮಾಡಲು ಶಸ್ತ್ರಾಸ್ತ್ರಗಳ ಸರಬರಾಯಿ, ಆಗಾಗ್ಗೆ ಬಾಂಬು ಸಿಡಿತ ಮೊದಲಾದ 'ಬಿಸಿಗೊಳಿಸುವ' ಕಾರ್ಯಕ್ರಮ ಕೈಕೊಂಡ ಅಮೆರಿಕಕ್ಕೆ ನಮ್ಮ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ.

o o o o

ಭಾರತ-ಪಾಕಿಸ್ತಾನಗಳು ಸೌಹಾರ್ದಯುತವಾದ ಸಹಜೀವನ ನಡೆಸಬೇಕೆಂಬ ಒಂದೇ ಗುರಿಯಿಂದ ಕಾಶ್ಮೀರಕ್ಕೆ ಆಗಾಗ್ಗೆ ಪ್ರತಿನಿಧಿಗಳನ್ನು ಕಳಿಸೋದು ಮತ್ತು ವಿಶ್ವಸಂಸ್ಥೆಯಲ್ಲಿ ಬಿಸಿ ಬಿಸಿ ಚರ್ಚೆ ನಡೆಸೋದು ತಾವೆಂದು ಅಮೆರಿಕಾ ಹೇಳಿದೆ. (ಪಾಕಿಸ್ಥಾನದಲ್ಲಿ ಯುದ್ಧ'ನೆಲೆ'ಗಳನ್ನುಸ್ಥಾಪಿಸಿದ್ದೂ ಕೂಡಾ ಇದಕ್ಕಾಗಿಯೇ ಇರಬೇಕು!)

ಅಂದ್ರೆ ಮೌನವಾಗಿದ್ರೆ ಕ್ರೋಧಾಗ್ನಿ ಒಳಗೆ ಕುದಿಯುತ್ತಿದ್ದು ಅಸ್ಫೋಟವಾಗುವ ಸಾಧ್ಯತೆ ಇದೆ. ಆದ ಕಾರಣ ಆಗಾಗ್ಗೆ ಮಾತಿನ ಕಿತ್ತಾಟ ನಡೆದು ಈ ಕೋಪ ಆವಿಯಾಗಿ ಹೋಗಲೆಂಬ ಅಮೆರಿಕಾದ ಈ ವಾದ ಚೆನ್ನಾಗಿದೆ!

ಅಷ್ಟೇ ಅಲ್ಲ. ವರ್ಷಕ್ಕೆರಡು ಬಾರಿ ವಿಶ್ವಸಂಸ್ಥೆ, ಭದ್ರತಾ ಸಮಿತಿಯಲ್ಲಿ ಮಾತಿನ ಯುದ್ಧವಾದ ಮೇಲೆ, ಬಾಕಿ ಸಮಯ? ಆಗಾಗ್ಗೆಗಡಿಯಿಂದಾಚೆಗೆ ಪರಸ್ಪರ ಗುಂಡುಗಳ ವಿನಿಮಯ ಮತ್ತು ಶ್ರೀನಗರ ಬಾಂಬು ಸ್ಫೋಟನಗಳಿಂದಲಾದರೂ ಅಮೆರಿಕಾ ಈ **ಸೌಹಾರ್ದಯುತ ಸಹಬಾಳ್ವೆಯ ಅಸ್ಥಿತ್ವದ** ಗುರಿಯನ್ನು ಸಾಧಿಸುತ್ತಿರುವುದು ಸಂತೋಷ!

o o o o

ರಷ್ಯಾ ಭದ್ರತಾ ಸಮಿತಿಯಲ್ಲಿ ಮಾತನಾಡುತ್ತಾ 'ಕಾಶ್ಮೀರ ಅಮೆರಿಕಾದ ಮಗು' ಎಂದು ಆಪಾದಿಸಿದೆ. ಅಮೆರಿಕಾ ಇದನ್ನು ಪ್ರತಿಭಟಿಸಿದೆ. ನಾವು ಕೂಡ ಇದನ್ನು ಪ್ರತಿಭಟಿಸುತ್ತೇವೆ.

ಯಾಕೆಂದರೆ, ಭಾರತ-ಪಾಕ್ ವಿಭಾಗವಾದಾಗ ಬ್ರಿಟಷರು ಜನ್ಮವಿತ್ತ 'ಮಗು' ಕಾಶ್ಮೀರವೆಂದಾದರೆ ಈಗ ಅಮೆರಿಕಾಕ್ಕೆ ಅದು 'ಸಾಕುಮಗ'ನೆಂದು ನಾವು ಭಾವಿಸುತ್ತೇವೆ.

o o o o

"ಅಮೆರಿಕಾ ಭಾರತಕ್ಕೆ ಸಹಾಯ ಮಾಡುವ ಯೋಜ್ನೆಯಲ್ಲಿದೆಯಂತೆ!"

"ಮತ್ತೆ....! ಟಿ. ಟಿ. ಕೆ.ಯವರು ಸುಮ್ನೆ ಅಮೆರಿಕಾ ಪ್ರವಾಸ ಕೈಕೊಂಡದ್ದಂತೀರಾ! ಅವರ ಮನಮೆಚ್ಚಿಸಲು ಕಮ್ಯೂನಿಸ್ಟರನ್ನು ಸಿಕ್ಕಾಪಟ್ಟೆ ಬೈದದಕ್ಕಾದರೂ ಸಹಾಯ ಸಿಗಬೇಡ್ವೆ?"

"ಅಲ್ರಿ....ಈ ಸಹಾಯ ಟಿ. ಟಿ ಕೆ. ಯ ಪ್ರಯತ್ನದ ಫಲವಲ್ಲವಂತೆ....!"

"ಮತ್ತೆ....?"

"ರಷ್ಯಾ ಭಾರತಕ್ಕೆ 6 ಕೋಟಿ ರೂ. ಸಾಲ ಕೊಟ್ಟಿದೆ ತಾನೆ! ಡಲ್ಲೆಸರು ನೆಹ್ರೂರನ್ನು ಕ್ರೆಮ್ಲಿನ್ ಏಜೆಂಟ ಅಂದ್ರೂ, ನಮ್ಮ ಪಿ ಎಸ್. ಪಿ.ಯವರು ಅವನ್ನು ಸಮರ್ಥಿಸಿದರೂ ಐಕರಿಗೆ ಸಮಾಧಾನವಿಲ್ಲವಂತೆ!

ರಷ್ಯಾ ಸಾಲಕ್ಕೂ ಅಮೆರಿಕಾ ಸಾಲಕ್ಕೂ ಸಂಬಂಧವೇನ್ರಿ!"

"ಅಯ್ಯೋ ಅಷ್ಟು ತಿಳಿಯೋಲ್ವೆ! ಎಲ್ಲಿ ತಟಸ್ಥ ರಾಷ್ಟ್ರಗಳಿಗೆ ರಷ್ಯಾ ಸಹಾಯ ಮಾಡಲು ಮುಂಬರುತ್ತೋ ಅಲ್ಲಿ ಅಮೆರಿಕಾ ಸಹಾಯ ಮಾಡ್ಲೇಬೇಕು!

"ಇಲ್ವಾದ್ರೆ........!"

"ನೆಹ್ರೂರಂಥವರು ಪೂರಾ ಕೈತಪ್ಪಿವಾಶಿಂಗ್ಟನ್ ಕಡೆ ಮುಖ ಮಾಡೋ ಬದ್ಲು ಕ್ರೆಮ್ಲಿನ್ ಕಡೆ ಹೋದ್ರೆ!

ಅದೆಲ್ಲಾ ಸರಿ!....ಆದ್ರೆ....ನೆಹ್ರೂನೇ ಹೀಗಿದ್ದು ಕಮ್ಯೂನಿಸ್ಟ್‌ರನ್ನು ಮೋಸ್ಕೊ ಏಜೆಂಟನ್ನೋದು ಯಾಕಂತ ಅರ್ಥವಾಗೋಲ್ಲವಲ್ಲಾ....!"

"ಅದೆಲ್ಲಾ ರಾಜಕೀಯ ತಂತ್ರ.....! ನೋಡಿ ಈ ಪಂಚವಾರ್ಷಿಕ ಯೋಜ್ನೇನಾ ಯಾರು ತಂದೋರು! ರಷ್ಯಾ. ಅತ್ತ ನೆಹ್ರೂ ರಷ್ಯಾವನ್ನು ಅನುಸರಿಸಿದ್ರೆ, ಇತ್ತ ಟಿ. ಟಿ. ಕೆ. ಅಮೆರಿಕಾ ನೋಡೋದು! ಇದೇ ರಾಜಕೀಯದಲ್ಲಿ ನಡಿಯೋ ನೀತಿ!"

"ಆದ್ರೆ ಈ ನಡುವೆ ಕಮ್ಯೂನಿಸ್ಟರನ್ನು ಬೈಯೋದು ಯಾಕ್ರಿ?"

"ಅಧಿಕಾರಕ್ಕೆ ಸವಾಲು ಹಾಕ ಹತ್ತಿದಾಗ ಅತ್ತೆ ಸೊಸೆಯನ್ನು ಹಳಿಯೋದು ರೂಢಿತಾನೆ........!"

"ಸೂಕ್ಷ್ಮದರ್ಶಿ"

'ಪಂಚಶೀಲ' ಅಂಗೀಕಾರಕ್ಕೆ ಕ್ರುಶ್ಚೇವ್‌ರ ಕರೆ

ಬೇರೆ ಬೇರೆ ಸಾಮಾಜಿಕ ವ್ಯವಸ್ಥೆಯಿರುವ ದೇಶಗಳೊಳಗಿನ ಸಂಬಂಧವು ಚೈನಾ ಹಾಗೂ ಭಾರತದ ಸಂಯುಕ್ತ ಘೋಷಣೆಯಾದ ಮತ್ತು ಬಾಂಡುಂಗ್ ಸಮ್ಮೇಳನದಲ್ಲಿ ಅಂಗೀಕರಿಸಲಾದ 'ಪಂಚಶೀಲ ತತ್ವ'ದ ಮೇಲೆ ಆಧರಿಸಲ್ಪಡಬೇಕೆಂದು, ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ನಿಕಿತಾ ಕ್ರುಶ್ಚೇವ್ ರವರು ಹೇಳಿದ್ದಾರೆ

'ಪಂಚಶೀಲ' ವನ್ನು ಅಂಗೀಕರಿಸದಿದ್ದಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದಿ ರಾಷ್ಟ್ರಗಳ ನಡುವೆ ನಡೆಯುವ ಯಾವ ಮಾತುಕತೆಯೂ ಅಪ್ರಯೋಜಕವಾಗುವುದು ಹಾಗೂ ಬರೇ ಕಿತ್ತಾಟವಾಗುವುದು ಖಂಡಿತವೆಂದು ಕ್ರುಶ್ಚೇವ್‌ರವರು ಯುನೈಟೆಡ್ ಪ್ರೆಸ್ ಏಜನ್ಸಿ ಪ್ರತಿನಿಧಿಗಿತ್ತ ಸಂದರ್ಶನದಲ್ಲಿ ಒತ್ತಿ ಹೇಳಿದ್ದಾರೆ. ವಿಶ್ವಶಾಂತಿ ಮತ್ತು ರಾಷ್ಟ್ರ ರಾಷ್ಟ್ರಗಳೊಳಗಿನ—ಅದು ಯಾವುದೇ ಸಮಾಜ ವ್ಯವಸ್ಥೆಯನ್ನವಲಂಭಿಸಲಿ—ಪರಸ್ಪರ ಸಂಬಂಧ ಯಾವ ರೀತಿಯಲ್ಲಿರಬೇಕೆಂಬುದು, ಹಾಗೂ ಈ ಬಗ್ಗೆ ರಷ್ಯಾದ ವಿಶೇಶ ನೀತಿಯೇನೆಂಬುದಕ್ಕೆ ಇದಕ್ಕೆ ದೊಡ್ಡ ಪ್ರತಿಪಾದನೆ ಬೇಡ. ಅದೂ, ರಷ್ಯಾಆಧುನಿಕ ಶಸ್ತ್ರಾಸ್ತ್ರಗಳಸ್ಪರ್ಧೆಯಲ್ಲಿ ಈ ಅಮೆರಿಕಾವನ್ನು ಹಿಂದಕ್ಕೆ ಹಾಕಿದ್ಮ ಈ ಘಟ್ಟದಲ್ಲಿ, ಅಮೆರಿಕಾದಂತೆ, ಸಿಕ್ಕಿದಲ್ಲಿ ಶಾಂತಿ ಭಂಗಮಾಡದೆ, ವಿದ್ರೋಹ ಕಾರ್ಯಕ್ರಮವೆಸಗದೆ, ಯುದ್ಧಕ್ಕೆ ಕಾಲ್ಕೆದರದೆ'ಪಂಚಶೀಲಾ'ದ ಘೋಷಣೆಇತ್ತಿರುವುದು ಅಭಿನಂದನಾರ್ಹ. ಇನ್ನಾದರೂ ಒಳಗುದಿ ಯುದ್ಧವನ್ನುಮುಂದುವರಿಸಬೇಕೆನ್ನುವ ಅಮೆರಿಕಾ ಸಾಮ್ರಾಜ್ಯಶಾಹಿ ಗುಂಪಿನ ಮೇಲೆ ಒತ್ತಾಯ ಹೇರಲು ವಿಶ್ವದ ಎಲ್ಲಾಶಾಂತಿಪ್ರಿಯರಾಷ್ಟ್ರಗಳುಮುಂಬರಲಿ

ಸಂತಾಪ ಸೂಚನೆ

ಪಾರ್ಟಿ ಕಾಮ್ರೇಡರಾಗಿದ್ದ ಜೆ. ಶ್ರೀನಿವಾಸರಾವ್ ಎಂಬುವರು ಅಕಾಲ ಮರಣಕ್ಕೆ ತುತ್ತಾದುದರ ಬಗ್ಗೆ ಜನಶಕ್ತಿ ಪತ್ರಿಕೆಯು ಸಂತಾಪವನ್ನು ಸೂಚಿಸುತ್ತದೆ. ಕಾಮ್ರೇಡ್ ಶ್ರೀನಿವಾಸರು ಶ್ರೀನಿವಾಸ ಸಿಲ್ಕ್ ಕೆಲಸಗಾರರ ಸಂಘದ ಖಜಾಂಚಿಯಾಗಿದ್ದರು. ಪಾರ್ಟಿಯ ಉತ್ಸಾಹಿ ತರುಣರಾಗಿದ್ದ ಕೇವಲ ಮೂವತ್ತು ವರುಷ ವಯಸ್ಸಿನವರಾಗಿದ್ದರು. ಅವರ ಸಣ್ಣ ವಯಸ್ಸಿನ ಪತ್ನಿಯೂ ಕೈಗೂಸೊಂದೂ ಈ ಅಕಾಲ ಮೃತ್ಯುವಿನಿಂದ ದುಃಖಕ್ಕೀಡಾಗಿದ್ದಾರೆ. ಅವರ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ.

(೭ನೇ ಪುಟದಿಂದ)

ಈ ಬಡ ನೌಕರನನ್ನು ಲಂಚಕ್ಕೋಸುಗ ಸತಾಯಿಸಲಾಗುತ್ತಿದೆಯೇ ಏನು? ಸಂಬಂಧಪಟ್ಟ ಅಧಿಕಾರಿಗಳುಶೀಘ್ರದಲ್ಲೇ ನಮ್ಮ ಬಿಲ್ಲು ಕೇವಲ 90 ರೂಪಾಯಿಯನ್ನು ದೊಡ್ಡ ಮನಸ್ಸಿನಿಂದ ಕಳಿಸಿಕೊಡಲು ಡೆವಲಪ್‌ಮೆಂಟ್ ಸಾಹೇಬರಿಗೆ ಅಪ್ಪಣೆ ಮಾಡುವರೆಂದು ನಂಬುತ್ತೇನೆ.

ಇತೀ, ಬಿ. ಯಂ. ವಿಶ್ವನಾಥಯ್ಯ,
ರ್‍ಯಾಪಿಡ್ ಆರ್ಟ್ಸ್ ದಾವಣಗೆರೆ

ಕಮ್ಯೂನಿಸ್ಟ್ ನೇತೃತ್ವದಲ್ಲಿ ಪಂಚಾಯತ್ ಬೋರ್ಡಿನ ಉತ್ತಮಾಡಳಿತೆ

ಮಂಗಳೂರು ಆಸುಪಾಸಿನ 5 ಗ್ರಾಮಗಳಲ್ಲಿ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟ್ ಬೆಂಬಲಿಗರು ಬಹುಮತವಿರುವ ಪಂಚಾಯಿತ್ ಬೋರ್ಡುಗಳಿವೆ. ಇವುಗಳಲ್ಲಿ ಎರಡು ಪಂಚಾಯಿತ್ ಬೋರ್ಡುಗಳ ಅಧ್ಯಕ್ಷರು ಮಜೂರರೇ ಆಗಿದ್ದಾರೆ.

ದೇರೆಬೈಲ್ ಪಂಚಾಯಿತ್ ಬೋರ್ಡು ಇವುಗಳಲ್ಲೊಂದು. ಇದರ ಅಧ್ಯಕ್ಷ ಹಂಚಿನ ಮಜೂರರಾಗಿದ್ದು, ಹಂಚಿನ ಮಜೂರರ ಸಂಘದ ಪ್ರಮುಖ ಕಾರ್ಯಕರ್ತರೂ ಆಗಿರುತ್ತಾರೆ. ಸದಸ್ಯರೂ ಹೆಚ್ಚಿನವರು ರೈತರು ಇಲ್ಲವೇ ಮಜೂರರು. ಈ ಪಂಚಾಯಿತ್ ಬೋರ್ಡಿನ ವಾರ್ಷಿಕಾದಾಯ ಅತ್ಯಲ್ಪ. ಆದರೆ ಈ ಪಂಚಾಯಿತ್ ಬೋರ್ಡು ಸಾಧಿಸಿದ ಗ್ರಾಮಾಭಿವೃದ್ಧಿಯ ಕಾಯಿದೆಗಳು ಊರಿನ ಜನರಿಂದಲೂ ಮೇಲಾಧಿಕಾರಿಗಳಿಂದಲೂ ಮೆಚ್ಚುಗೆ ಪಡೆದಿದೆ.

ದೇರೆಬೈಲ್ ಗ್ರಾಮಕ್ಕೆ ತಾಗಿ ಪದವು ಗ್ರಾಮವಿದೆ. ಇದು ದೊಡ್ಡ ಗ್ರಾಮ. ವರುಷಕ್ಕೆ ಉತ್ಪತ್ತಿ ಸುಮಾರು 10 ಸಾವಿರ ರೂ. ಗಳು. ಈ ಪಂಚಾಯಿತ್ ಬೋರ್ಡು ಕೂಡಾ ಕಮ್ಯೂನಿಸ್ಟ್ ಸದಸ್ಯರ ನೇತೃತ್ವದಲ್ಲಿದೆ. ಇದಕ್ಕೆ ಕೆಲವು ಜನವಿರೋಧಿ ಕಾಂಗ್ರೆಸ್ಸಿಗರ ಕಿರುಕುಳಹೆಚ್ಚುತ್ತಾ ಇದೆ.

ಸಾಧನೆಗಳು

ಹೀಗೆ ಎಡೆತಡೆಗಳಿದ್ದರೂ ಈ ಪಂಚಾಯಿತ್ ಬೋರ್ಡು ಒಂದು ವರ್ಷದ ಅವಧಿಯಲ್ಲಿ 30 ದಾರಿ ದೀಪಗಳನ್ನು ಹಾಕಿಸಿದೆ. ಎರಡು ಕಾಲು ಸಂಕಗಳನ್ನು ರಚಿಸಿದೆ. ಹಲವಾರು ರಸ್ತೆಗಳ ರಿಪೇರಿ ನಡೆಸಿದೆ. ಒಂದು ವಾಚನಾಲಯವನ್ನು ಪ್ರಾರಂಭಿಸಿದೆ. ವಿದ್ಯುತ್‌ದೀಪ ಹಾಕಿಸಲು ಸರಕಾರದ ಮಂಜೂರಾತಿಗಾಗಿ ಬರೆದಿದೆ.

ಪ್ರತಿಗಾಮಿಗಳಿಂದ ಸುಳ್ಳು ಆರೋಪ

ಹೀಗೆ ಅಲ್ಪಾವಕಾಶದಲ್ಲಿ ಈ ರೀತಿ ಉತ್ತಮ ಕಾರ್ಯ ಸಾಧಿತವಾಗಿದ್ದರೂ ಗ್ರಾಮದಲ್ಲಿ ರಾಜಕೀಯ ಅಪಜಯ ಹೊಂದಿದ ಕಾಂಗ್ರೆಸಿಗರೆಂದು ಕೊಳ್ಳುವ ಮಂದಿ ಪಂಚಾಯಿತ್ ಬೋರ್ಡಿನ ವಿರುದ್ಧ ಹಲವಾರು ಒಳಸಂಚು ನಡೆಸಿರುತ್ತಾರೆ. ಪ್ರಾರಂಭದಲ್ಲಿ ಪಂಚಾಯಿತ್‌ಗೆ ತೆರಿಗೆ ಕೊಡದಂತೆ ಜನರನ್ನು ಪ್ರೇರೇಪಿಸಿ ಕೆಲವರಿಗೆ ಉದ್ದಿಶ್ಯಪೂರ್ವಕವಾಗಿ ತೆರಿಗೆ ಹೆಚ್ಚು ಹಾಕಲಾಕಿದೆಯೆಂದು ಅಧಿಕಾರಿಗಳಿಗೆ ಬರೆದರು. ಅಧಿಕಾರಿಗಳು ತನಿಖೆ ನಡೆಸಿ ಹಾಗೇನೂ ಆಗಿಲ್ಲವೆಂಬ ಅಭಿಪ್ರಾಯಪಟ್ಟರಲ್ಲದೆ ತೆರಿಯ ಹಣ ಪಾವತಿ ಮಾಡಿ ಆನಂತರ ಬೇಕಾದವರು ಅಪೀಲು ಮಾಡಬಹುದೆಂದು ತಿಳಿಸಿದರು.

ಹೀಗೆ ಇದರಿಂದಲೂ ತೃಪ್ತರಾಗದ ಈ ಮಂದಿ ಈ ಪಂಚಾಯಿತ್ ಅಧ್ಯಕ್ಷ ಮತ್ತು ಸದಸ್ಯರು ಅವಿದ್ಯಾವಂತರೂ ಪಂಚಾಯಿತ್ ನಡೆಸಲು ಅಯೋಗ್ಯರೂ, ಒಂದೂವರೆ ವರುಷಗಳ ಹಿಂದೆ ನಡೆದ ಪಂಚಾಯಿತ್ ಚುನಾವಣೆ ಕ್ರಮಬದ್ಧವಲ್ಲವೆಂದೂ ಪಂಚಾಯಿತ್ ಬೋರ್ಡು ತೆರಿಗೆಯ ಹಣವನ್ನು ದುರುಪಯೋಗಗೊಳಿಸುವರೆಂದೂ ಪಂಚಾಯಿತ್ ಆಫೀಸರರಿಗೆ ಅರ್ಜಿ ಕೊಟ್ಟರು. ಇದನ್ನು ತನಿಖೆ ನಡೆಸಲಾಯಿತು. ಈ ಅರ್ಜಿದಾರರೇ ತನಿಖೆಯ ವೇಳೆ ಹಾಜರಿರಲಿಲ್ಲ. ಆಫೀಸರು ತನಿಖೆ ನಡೆಸಿ ಅರ್ಜಿಯ ಆರೋಪಗಳೆಲ್ಲ ನಿರಾಧಾರವೆಂದು ಅಭಿಪ್ರಾಯಪಟ್ಟರು.

ಪುನಃ ಇಂತಹ ಇನ್ನೊಂದು ಅರ್ಜಿ ಬರೆದರು. ಜಿಲ್ಲಾಧಿಕಾರಿಗಳು ಕಳೆದ 8-10-57ರಲ್ಲಿ ತನಿಖೆಗೆ ಬಂದಾಗ ಈ ಅರ್ಜಿದಾರರು ಬರಲಿಲ್ಲವಾದ ಕಾರಣ ಅಧಿಕಾರಿಗಳು ಜನ ಕಳುಹಿಸಿ ಈ ಮಂದಿಯನ್ನು ಬರಮಾಡಿಕೊಂಡರು.

ಬಣ್ಣ ಬಯಲಾಯಿತು !

ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ಪರಿಶೀಲಿಸಿದಾಗ "ಅರ್ಜಿದಾರ"ರ ಬಣ್ಣವೆಲ್ಲ ಹೊರಬಿತ್ತೆಂದು ತಿಳಿದು ಬಂದಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ಬೇಸರಪಟ್ಟು ಇವರಿಗೆ ಹಿತವಚನ ನುಡಿದರೆಂದೂ ತಿಳಿದುಬಂದಿದೆ.

ಆದರೆ ಆ ಬಳಿಕವೂ ಈ ಮಂದಿ ಸುಮ್ಮಗೆ ಕುಳಿತಿಲ್ಲ. ಮಂಗಳೂರಿನ ನವಭಾರತದಲ್ಲಿ ಈ ಬಗ್ಗೆ ತಲೆಬುಡವಿಲ್ಲದ ಸುದ್ದಿಯೊಂದನ್ನು ಪ್ರಕಟಿಸಲಾಗಿದೆ.

ಪದವು ಪಂಚಾಯಿತ್ ಬೋರ್ಡು ಸಾಧಿಸಿದ ಕಾರ್ಯಗಳು, ಮತ್ತು ಈ ವಿರೋಧಿಗಳ ಇಪಪ್ರಚಾರದ ಹಿನ್ನೆಲೆ ಇವನ್ನು ವಿವರಿಸಲು ಕಮ್ಯೂನಿಸ್ಟ್ ಪಾರ್ಟಿಯ ಪದವು ಶಾಖೆಯ ಆಶ್ರಯದಲ್ಲಿ ಕಳೆದ ತಾ. 26ರಂದು ಜರಗಿತು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀ ಎ. ಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಲಿಂಗಪ್ಪಸುವರ್ಣ, ಪಂಚಾಯಿತ್ ಬೋರ್ಡು ಅಧ್ಯಕ್ಷ ಶ್ರೀ ಕ್ಸೇವಿಯರ್ ಲೂಯಿಸ್, ಕಂಕನಾಡಿ ಪಂಚಾಯಿತ್ ಅಧ್ಯಕ್ಷ ವೈದ್ಯ ಬಿ. ದಾಸಪ್ಪ ಮೊದಲಾದವರು ಭಾಷಣವಿತ್ತರು. ಕಾರ್ಯದರ್ಶಿ ಶ್ರೀ ಪಿ ಚಂದಪ್ಪನವರು ಪ್ರಾರಂಭದಲ್ಲಿ ಸದಸ್ಯರನ್ನು ಸ್ವಾಗತಿಸಿದರು.

ಮಂಗಳೂರು ಪತ್ರ

ಎರಡು ಗೇರುಬೀಜ (ಗೋಡಂಬಿ) ಕಾರ್ಖಾನೆಗಳು ಬಂದ್ !

ಮಂಗಳೂರಿನ ಗೇರುಬೀಜ ಕಾರ್ಖಾನೆಗಳ ಮಜೂರ ಮತ್ತು ಮಾಲಕರೊಳಗಣ ವಿವಾದಗಳ ಸಂಬಂಧದಲ್ಲಿ ಒಂದು ಪಂಚವಾರ್ಷಿಕ ಕೈಗಾರಿಕಾ ಶಾಂತಿ ಒಪ್ಪಂದವಾಗಬೇಕೆಂಬ ಪ್ರಯತ್ನಗಳು ನಡೆಯುತ್ತಿರುವಾಗಲೇ ಇಂತಹ ಒಪ್ಪಂದವಾಗದಂತೆ ಮಾಲಕರ ಕಡೆಯಿಂದ ಪ್ರಯತ್ನಗಳು ನಡೆಯುತ್ತಿವೆ. ಈಗಾಗಲೇ ಮಂಗಳೂರಿನ ಪಿಜಾರ್‌ಕಾರ್, ಮತ್ತು ಫೆರ್ನಾಂಡೀಸ್ ಗೇರುಬೀಜ ಕಾರ್ಖಾನೆಗಳನ್ನು ಈ ತಿಂಗಳಾಂತ್ಯದೊಳಗೆ ಮುಚ್ಚುವ ನೋಟೀಸು ಹಾಕಲಾಗಿದೆ. ಹೀಗಾದರೆ ಸುಮಾರು 2,000 ಮಜೂರ ಕುಟುಂಬಗಳು ಉಪವಾಸ ಬೀಳಬೇಕಾಗುವುದು. ಈ ನೋಟೀಸನ್ನು ಹಿಂದೆಗೆಯಬೇಕೆಂದೂ, ಕಾರ್ಖಾನೆಗಳನ್ನು ಮುಚ್ಚಬಾರದೆಂದೂ ಮಜೂರರು ಸಂಘಟಿತರಾಗಿ ಚಳವಳಿ ನಡೆಸುತ್ತಿದ್ದಾರೆ.

ಕಮ್ಯೂನಿಸ್ಟ್ ಪಾರ್ಟಿಯ ನಿಧಿ ಸಂಗ್ರಹ

ಕಳೆದ ಮಹಾ ಚುನಾವಣೆಯ ನಂತರ ದೇಶದೊಳಗೆ ಕಮ್ಯೂನಿಸ್ಟ್ ಪಾರ್ಟಿಯ ಜವಾಬ್ದಾರಿಯು ತುಂಬಾ ಹೆಚ್ಚಿದೆ. ಎಲ್ಲ ಕಡೆಗಳಲ್ಲೂ-ಮೂಲೆ ಮೂಲೆಗಳಲ್ಲೂ ಜನ ಕಮ್ಯೂನಿಸ್ಟ್ ಪಾರ್ಟಿಯ ಕುರಿತು ತಿಳಿದುಕೊಳ್ಳಲು ಬಯಸುತ್ತಾರೆ. ರೈತ-ಮಜೂರರು ಸಂಘಟಿತರಾಗಲು ಇಚ್ಛಿಸಿ ಮುಂದೆ ಬರುತ್ತಿದ್ದಾರೆ.

ದಕ್ಷಿಣ ಕನ್ನಡದಲ್ಲೂ ಸಾಮೂಹಿಕ ಸಂಘಟನೆಗಳನ್ನು ಬಲಪಡಿಸಲು, ಇಂತಹ ಸಂಘಟನೆಗಳಿಲ್ಲದಲ್ಲಿ ಅವನ್ನು ಕಟ್ಟಲು, ಜನರಲ್ಲಿ ರಾಕೀಯ ಜಾಗ್ರತಿಯನ್ನು ಹರಡಲು ಕಮ್ಯೂನಿಸ್ಟ್ ಪಾರ್ಟಿ ಮುಖ್ಯ ಪಾತ್ರ ವಹಿಸಬೇಕಾಗಿದೆ. ಹಾಗಾಗಬೇಕಾದರೆ ಉತ್ತಮ ಕಾರ್ಯಕರ್ತರು, ಪ್ರಚಾರ ಪ್ರಕ್ಷೋಭೆಗಳು, ಅಗತ್ಯ. ಈ ಕಾರ್ಯ ಪೂರೈಸಲ ಇದೀಗ ಆರ್ಥಿಕ ಕೊರತೆಯಿಂದಾಗಿ ಕಷ್ಟ ಸಾಧ್ಯವಾಗುತ್ತಿದೆ. ಎಂತಲೇ ಜಿಲ್ಲಾ ಸಮಿತಿ ಪಾರ್ಟಿಯ ನಿಧಿ ಸಂಗ್ರಹವೊಂದನ್ನು ನಡೆಸಬೇಕೆಂದು ಎಲ್ಲ ಶಾಖೆಗಳಿಗೂ ಕರೆಕೊಟ್ಟಿದೆ. ದಶಂಬರ ತಿಂಗಳೊಳಗಾಗಿ ಈ ನಿಧಿ ಸಂಗ್ರಹದ ಕಾರ್ಯ ಕೊನೆಗೊಳ್ಳಲಿರುವುದು. ಇದೀಗ ಈ ನಿಧಿ ಸಂಗ್ರಹದ ಕಾರ್ಯದಲ್ಲಿ ಎಲ್ಲ ಪಾರ್ಟಿ ಶಾಖೆಗಳು ನಿರತವಾಗಿವೆ.

ಪ್ರತಿಭಟನಾ ದಿನಕ್ಕೆ ತಯಾರಿ

ಮಂಗಳೂರು ನಗರಸಭೆಯ ಪಕ್ಷಪಾತ ನೀತಿಗೆ ನಗರದಾದ್ಯಂತ ಪ್ರತಿಷೇಧ ವ್ಯಕ್ತಪಡಿಸಬೇಕೆಂಬ ಕಮ್ಯೂನಿಸ್ಟ್ ಪಾರ್ಟಿಯ ನಗರ ಸಮಿತಿಯ ಕರೆಯಂತೆ ಈ ಪ್ರತಿಷೇದಿನದ ತಯಾರಿಯಾಗಿ ಪ್ರತಿ ವಾರ್ಡುಗಳಲ್ಲೂ ಸಾರ್ವಜನಿಕ ಸಭೆಗಳು ಜರುಗುತ್ತಲಿವೆ. ತಾ. 30ಕ್ಕೆ ಅಂತ್ಯವಾಗುವ ವಾರದಲ್ಲಿ ಅತ್ತಾವರ, ಜಪ್ಪು ವಾರ್ಡುಗಳಲ್ಲಿ ಇಂತಹ ಸಭೆಗಳು ಜರಗಿವೆ.

—o—

ಮೈಸೂರು ಕಾಂಗ್ರೆಸ್ಸಿನೊಳಗಣ 'ಗುಂಪು ರಾಜಕೀಯ' ಮಂಗಳೂರಿಗೂ ಹರಡಿದೆ

ಮೈಸೂರು ಕಾಂಗ್ರೆಸಿನೊಳಗಣ ಕಚ್ಚಾಟ ಆಚಾರ್ಯ ವಿನೋಬಾರವರ ಮಾತಿನಲ್ಲಿ ಹೇಳುವುದಾದರೆ"ವಾಲಿ-ಸುಗ್ರಿವ-ಹನುಮಂತರ ಕಾಳಗ" ಇದೀಗ ದ. ಕ. ಜಿಲ್ಲೆಗೂ ಹರಡಿದಂತಿದೆ.

ದ. ಕ. ಜಿಲ್ಲಾ ಕಾಂಗ್ರೆಸಿನೊಳಗಣ ಕಚ್ಚಾಟವೇನೂ ಕಡಿಮೆಯದಲ್ಲ. ಆದರೂ ಇದೀಗ ಪ್ರಾಂತ ರಚನೆಯಾದ ನಂತರ ಮಂತ್ರಿಮಂಡಲದ ರಚನೆಯಲ್ಲಿ ದ. ಕನ್ನಡಕ್ಕೂ ಸ್ವರವಿರುವುದರಿಂದ ಮಂತ್ರಿಮಂಡಲಕ್ಕಾಗಿರುವ ಒಳಜಗಳದ ಗಾಳಿ ನಮ್ಮ ಜಿಲ್ಲೆಗೂ ಬೀಸುತ್ತಿದೆ.

ಕಳೆದ ವಾರ ಧರ್ಮಸ್ಥಳದಲ್ಲಿ "ಸರ್ವಧರ್ಮ ಸಮ್ಮೇಲನ" ಎಂಬ ಹೆಸರಿನಲ್ಲಿ ಜಾತ್ರೆಯೊಂದು ನಡೆಯಿತು! ಈ ಸಮ್ಮೇಳನದಲ್ಲಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೂ, ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೂ ಭಾಗವಹಿಸಿದ್ದರು.

ಶ್ರೀ ನಿಜಲಿಂಗಪ್ಪನವರಿಗೆ ಮೂಡಬಿದರೆಯ ಭೂಮಾಲಕ ಸಂಘದವರು ಮನವಿಯೊಂದನ್ನು ಕೊಟ್ಟು ಯಾವ ರೀತಿಯ ಭೂಸುಧಾರಣೆಯೂ ಕೂಡದೆಂದೂ ಜತ್ತಿ ಸಮಿತಿ ವರದಿಯನ್ನು ತಿರಸ್ಕರಿಸಬೇಕೆಂದೂ ಕೇಳಿಕೊಂಡರು. ಅದಕ್ಕೆ ಉತ್ತರವಾಗಿ ಶ್ರೀ ನಿಜಲಿಂಗಪ್ಪನವರು" ಭೂಸಮಸ್ಯೆ ಇಂದು ಪ್ರಮುಖ ಸಮಸ್ಯೆಯೆಂದೂ ಕಾಲದ ಮುನ್ನಡೆಯೊಂದಿಗೆ ನಾವೂ ಮುನ್ನಡೆಯಬೇಕೆಂದೂ, ಭೂಸುಧಾರಣೆ ಕೆಲವರಿಗೆ ತೊಂದರೆಯೊಗಬಹುದೆಂದೂ ಆದರೆ ಇದರಿಂದ ದೇಶದ ಆರ್ಥಿಕ ಪ್ರಗತಿಯಾಗುವುದೆಂದೂ ಹೇಳಿದರಲ್ಲದೆ "ರಶ್ಯದಿಂದ ನಾವು ಎಲ್ಲವನ್ನೂ ಕಲಿಯಬೇಕೆಂದಿಲ್ಲವಾದರೂ ಕೆಲವು ವಿಷಯಗಳಲ್ಲಿ ರಶ್ಯವನ್ನು ಅನುಸರಿಸಬೇಕಾಗುವುದೆಂದೂ" ಹೇಳಿದರಾಗಿ ವರದಿಯಾಗಿದೆ.

ಮುಖ್ಯ ಮಂತ್ರಿಯವರು ಹೇಳಿದ ಮಾತುಗಳು ಸ್ವಾಗತಾರ್ಹ ಆದರೆ ಸರಕಾರ ಪ್ರಯೋಗದಲ್ಲಿ ಮಾಡುತ್ತಿರುವುದೇನು? ಎಂಬುದೇ ಗಮನಿಸತಕ್ಕ ವಿಷಯ.

ಭೂಮಾಲಕರೊಂದಿಗೆ ಕೆಂಗಲ್ಲರು !

ಅದಿರಲಿ—ಆ ಬಳಿಕ ಎರಡು ದಿನಗಳ ಬಳಿಕ ಇದೇ ಮೂಡಬಿದರೆಯ ಭೂಮಾಲಕರು ಮಾಜಿ ಮಂತ್ರಿ ಶ್ರೀ ಹನುಮಂತಯ್ಯನವರಿಗೆ ಇದೇ ಮಾದರಿಯ ಮನವಿ ಅರ್ಪಿಸಿದರು, ಅದಕ್ಕೆ ಶ್ರೀ ಹನುಮಂತಯ್ಯನವರು ಉತ್ತರಿಸಿ "ಭೂಸುಧಾರಣೆಯ ಪ್ರಶ್ನೆಯಲ್ಲಿ ಅತ್ಯವಸರ ಮಾಡಬಾರದೆಂದೂ, ಭೂಮಾಲಕರ ಹಿತವನ್ನು ನೋಡಬೇಕಾಗಿದೆಯೆಂದೂ, ಜತ್ತಿ ಸಮಿತಿಯ ವರದಿ ಭೂಮಾಲಕರು ಒಪ್ಪುವಂತಿಲ್ಲವಾದರೆ ಕಾಂಗ್ರೆಸ್ ಸಮಿತಿಗಳ ಮೂಲಕ, ಯಂ. ಎಲ್. ಎ. ಗಳ ಮೂಲಕ ಭೂಮಾಲಕ ಸಂಘಗಳ ಮೂಲಕ ಸರಕಾರವನ್ನು ಒತ್ತಾಯಿಸಬೇಕೆಂದೂ ಹೇಳಿದ ವರದಿಯಾಗಿದೆ.

ಶ್ರೀ ಹನುಮಂತಯ್ಯನವರ ಈ 'ಉವಾಚ" ಮಂತ್ರಿಮಂಡಲದ ವಿರುದ್ಧ ಜಮೀನ್ದಾರರನ್ನು ಎತ್ತಿಕಟ್ಟಿ ತನ್ಮೂಲಕ ಜಿಲ್ಲೆಯ ಯಂ. ಎಲ್. ಎ. ಗಳ ಬಲವನ್ನು ತನ್ನ ಕಡೆಗೆ ಸಂಪಾದಿಸುವಂತೆ ಮಾಡುವುದೇ ಆಗಿದೆಎಂಬುದು ಸ್ವಯಂಸ್ಪಷ್ಟ. ಆದರೆ ಇಪ್ಪತ್ತನೆಯ ಶತಮಾನದಲ್ಲೂ ಪಾಳೆಯಗಾರೀ ಪದ್ಧತಿಯನ್ನು ಈ ರೀತಿಯಲ್ಲಿ ಬೆಂಬಲಿಸಿ—ದೇಶದ ಆರ್ಥಿಕ ಪ್ರಗತಿಗೆ ತಡೆಯನ್ನುಂಟು ಮಾಡುವ ಶ್ರೀ ಹನುಮಂತಯ್ಯನಂತವರು ಇನ್ನೂ "ಮುಖಂಡ"ರಂತೆ ವರ್ತಿಸುತ್ತಿದ್ದಾರಲ್ಲ ಎಂಬು

(ಎರಡನೆ ಪುಟ ನೋಡಿ)

ರೈತ ಸಮ್ಮೇಳನದ ನಿರ್ಣಯಗಳು

ತ್ತೆಯುವರ ಮೇಲೆ ದಾವೆ ಹೂಡಲಾಗುತ್ತಿದೆ. ಎಲ್ಲಕ್ಕೂ ಮಿಗಿಲಾಗಿ ಈ ವರೆಗೆ ಇರದಿದ್ದ ಮೊಹರು ಹಾಕುವ ಕ್ರಮವನ್ನು (ತಾಳೆ ಮರಗಳಿಗೆ) ಇದೀಗ ಜಾರಿ ಮಾಡಬೇಕೆಂಬ ಒತ್ತಾಯ ನಡೆಯುತ್ತಿದೆ. ಇದರಿಂದ ಜಿಲ್ಲೆಯ ಹಳ್ಳಿಗಳ ರೈತರಲ್ಲಿ ನಿರುದ್ಯೋಗ ಬೆಳೆಯದಂತೆಯೂ, ತಾಳೆ ಬೆಲ್ಲದ ಗುಡಿ ಕೈಗಾರಿಕೆ ಅಭಿವೃದ್ಧಿಯಾಗುವಂತೆಯೂ ಈ ಸಮ್ಮೇಳನವು ಈ ಕೆಳಗಿನ ಕೇಳಿಕೆಗಳನ್ನು ಸರಕಾರದ ಮುಂದಿಡಲು ನಿರ್ಣಯಿಸುತ್ತದೆ.

1 ತಾಳೆ ಬೆಲ್ಲದ ಮೂರ್ತೆಗೆ ಲೈಸೆನ್ಸ ಅಗತ್ಯವೆಂಬ ಕ್ರಮವನ್ನು ರದ್ದುಗೊಳಿ ಅನಿರ್ಬಂಧವಾಗಿ ಬೆಲ್ಲದ ಮೂರ್ತೆ ನಡೆಸಲು ಅನುಮತಿ ಕೊಡಬೇಕು.

2. ತಾತ್ಕಾಲಿಕವಾಗಿ ಕೊಡಲಾಗುತ್ತಿರುವ ಲೈಸನ್ಸುಗಳ ಮಟ್ಟಿಗೆ ಎರಡೆರಡು ಜಾಮೀನು ಕೇಳುವ ಕ್ರಮವನ್ನು ಕೂಡಲೇ ರದ್ದುಗೊಳಿಸಬೇಕು.

3. ಲೈಸನ್ಸಿಲ್ಲದೆ ಬೆಲ್ಲದ ಮೂರ್ತೆ ಮಾಡಿದರೆಂದು ಬೊಂಡಂತಿಲ ಗ್ರಾಮದ ಹದಿನೇಳು ಮಂದಿ ಮೂರ್ತೆದಾರರ ಮೇಲೆ ಹೂಡಲಾದ ದಾವೆಯನ್ನು ಹಿಂತೆಗೆದುಕೊಳ್ಳಬೇಕು.

4. ತಾಳೆ ಮರಗಳಿಗೆ ಮೊಹರು ಹಾಕುವ ಕ್ರಮವನ್ನು ಜಾರಿಗೊಳಿಸಬಾರದು.

5. ಮೂರ್ತೆಯವರ ಸಹಕಾರಿ ಸಂಘಗಳಲ್ಲಿ ವ್ಯಾಪಾರ ನಡೆಸದೆ ಕಮಿಷನ್ ವಸೂಲು ಮಾಡುತ್ತಿರುವ ಕ್ರಮವನ್ನು ಕೂಡಲೇ ನಿಲ್ಲಿಸಿ' ಬೆಲ್ಲದ ವ್ಯಾಪಾರ ನಡೆಸಲನುಕೂಲವಾಗುವಂತೆ, ಯೋಗ್ಯ ಆರ್ಥಿಕ ಸಹಾಯವನ್ನು ನೀಡುವುದು ಮೂಲಕ ಬೇಕಾದ ಯಾವತ್ತು ವ್ಯವಸ್ಥೆಗಳನ್ನು ಸರಕಾರ ಮಾಡಬೇಕು.

6. ಈಗ ಒತ್ತಾಯದಿಂದ ಹುಂಡಿ ವಸೂಲು ಮಾಡುವ ಕ್ರಮವನ್ನು ನಿಲ್ಲಿಸಿ ಈವರೆಗೆ ವಸೂಲಾದ ಹುಂಡಿ ಹಣವನ್ನು ಮೂರ್ತೆದಾರರಿಗೆ ಮರು-ಪಾವತಿ ಮಾಡಬೇಕು.

7. ಮೂರ್ತೆಯವರ ಸಹಕಾರಿ ಸಂಘಗಳ ಮೂಲಕ ಬಾಣಲೆ ಸುಣ್ಣ ಮಡಿಕೆ ಇತ್ಯಾದಿ ಸಾಮಾಗ್ರಿಗಳು ಸುಲಭ ದರದಲ್ಲಿ ಮೂರ್ತೆಯವರಿಗೆ ಒದಗಿಸುವಂತೆ ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಸರಕಾರ ಕೈಕೊಳ್ಳಬೇಕು.

8. ಇದಕ್ಕೆ ಅವಶ್ಯವಿರುವ ಯೋಗ್ಯ ಸಹಕಾರಿ ತರಬೇತಿಯನ್ನು ಈ ಸಂಘಗಳ ಮೂರ್ತೆದಾರ ಅಧಿಕಾರಿಗಳಿಗೆ ಕೊಡಿಸುವ ವ್ಯವಸ್ಥೆಯನ್ನು ಸರಕಾರವು ಕೂಡಲೇ ಮಾಡಬೇಕು.

9. ಗೇಣಿಗೆ ವಹಿಸಿ ಮೂರ್ತೆ ಮಾಡುವ ತಾಳೆ ಮರಗಳಿಗೆ ಗೇಣಿ ಏರಿಸದಂತೆ ತಡೆಹಾಕಿ, ನ್ಯಾಯ ಗೇಣಿಯನ್ನು ನಿರ್ಣಯ ಮಾಡಬೇಕು.

ಕೃಷಿ ಕೆಲಸಗಾರರ ಕನಿಷ್ಟ ವೇತನದ ಬಗ್ಗೆ

ಕರ್ನಾಟಕ ಪ್ರಾಂತವ ಎಲ್ಲಾ ಪ್ರದೇಶಗಳಲ್ಲಿಯೂ ಕೃಷಿ ಕೂಲಿಗಾರರಿಗೆ ನ್ಯಾಯವಾದ ಕನಿಷ್ಟ ವೇತನ ನಿರ್ಣಯ ಮಾಡುವುದು ಅಗತ್ಯವೆಂದು ಈ ಸಮ್ಮೇಳನ ಅಭಿಪ್ರಾಯಪಡುತ್ತದೆ. ಕನಿಷ್ಠ ವೇತನ ನಿರ್ಣಯ ಕಾಯಿದೆಯಂತೆ ಕನಿಷ್ಠ ವೇತನ ನಿರ್ಣಯಿಸಲು ಸರಕಾರ ಕ್ರಮ ವಹಿಸಬೇಕೆಂದೂ, ಆ ಬಗ್ಗೆ ಎಲ್ಲ ತಾಲ್ಲೂಕುಗಳಲ್ಲೂ ರಾಜ್ಯದ ಮಟ್ಟಿಗೂ ರೈತ ಸಂಘದ ಪ್ರತಿನಿಧಿಗಳನ್ನು ಒಳಗೊಂಡ ಸಲಹಾ ಸಮಿತಿಗಳನ್ನು ನೇಮಿಸಬೇಕೆಂದೂ ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

(ಮುಂದುವರಿಯುವುದು)

ಚಿತ್ರದುರ್ಗ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಸ್ಥಾಪನೆ

ಮೈಸೂರು ರಾಜ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ತೀವ್ರವಾಗಿ ದಿನೇ ದಿನೇ ದಿನೇ ಬೆಳೆಯುತ್ತಿರುವುದು ಈಗ ಕಂಡುಬರುತ್ತಿದೆ. ಹೊಸ ಹೊಸ ಪ್ರದೇಶಗಳಲ್ಲಿ ಪಾರ್ಟಿ ಸ್ಥಾಪನೆಯಾಗುತ್ತಿದೆ. ಪಾರ್ಟಿ ಇದ್ದ ಕಡೆ ಸದಸ್ಯರ ಸಂಖ್ಯೆ ಹೆಚ್ಚುತ್ತಿದೆ.

ಇಷ್ಟು ದಿವಸ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಜಿಲ್ಲಾ ಸಂಘಟನೆ ಇರಲಿಲ್ಲ. ದಾವಣಗೆರೆ ಮತ್ತು ಹರಿಹರದಲ್ಲಿ ಮಾತ್ರ ಪಾರ್ಟಿ ಯೂನಿಟ್‌ಗಳಿದ್ದವು. ಆದರೆ ಈಗ ಇತರ ಕಡೆಗಳಲ್ಲೂ ಪಾರ್ಟಿಗೆ ಕೆಲಸ ಮಾಡಲು ಜನ ಮುಂದೆ ಬಂದಿರುವುದು ಸ್ವಾಗತಾರ್ಹವಾಗಿದೆ.


ತಾ|| 24-11-57ರಂದು ಜಿಲ್ಲೆಯ ಕಾರ್ಯಕರ್ತರ ಸಭೆಯು ಚಿತ್ರದುರ್ಗದಲ್ಲಿ ಸೇರಿ ಒಂದು ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯಲ್ಲಿ ಚಿತ್ರದುರ್ಗದ ಪ್ರಸಿದ್ಧ ವಕೀಲರಾದ ಎಚ್. ಎಸ್. ವೆಂಕಟಾಚಲಯ್ಯ, ಎಸ್. ಹನುಮಂತ ರೆಡ್ಡಿ, ಎಚ್. ಎಸ್. ರಾಮಚಂದ್ರರಾವ್ (ದಾವಣಗೆರೆ) ಸಿ. ಪಾರ್ಥಸಾರಥಿ (ಹಿರಿಯೂರು), ತಿಮ್ಮಣ್ಣ (ಚಳ್ಳಕೆರೆ) ಮುಂತಾದವರಿದ್ದಾರೆ. ಚಿತ್ರದುರ್ಗದ ಎಸ್. ಹನುಮಂತ ರೆಡ್ಡಿಯವರು ಸಮಿತಿಯ ಕಾರ್ಯದರ್ಶಿಯವರಾಗಿದ್ದಾರೆ.

ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ 24ನೇ ಸಂಜೆಗೆ ಬಹಿರಂಗ ಸಭೆ ನಡೆಯಿತು. ಎಚ್. ಎಸ್. ವೆಂಕಟಾಚಲಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಎಸ್. ಹನುಮಂತ ರೆಡ್ಡಿಯವರು ಸ್ವಾಗತ ಭಾಷಣ ಮಾಡಿದರು. ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಕಾ|| ಎನ್. ಎಲ್. ಉಪಾಧ್ಯಾಯರು ಭಾಷಣ ಮಾಡಿ, ಕಮ್ಯೂನಿಸ್ಟ್ ಪಾರ್ಟಿಯ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಮತ್ತು ಕಮ್ಯೂನಿಸ್ಟ್ ಪಾರ್ಟಿಗೆ ಬೆಂಬಲ ನೀಡಬೇಕೆಂದು ವಿನಂತಿ ಮಾಡಿದರು.

ವಿನಂತಿ

'ಜನಶಕ್ತಿ'ಗೆ ಹಣ ಕಳಿಸುವ ನಮ್ಮ ಏಜಂಟರಾಗಲೀ ಚಂದಾದಾರರಾಗಲೀ ಇನ್ನು ಮುಂದೆ ಮನಿಆರ್ಡರನ್ನು ನೇರವಾಗಿ "ಮೆನೇಜರ್" ಜನಶಕ್ತಿ ಇವರಿಗೆ ಕಳಿಸಿಕೊಟ್ಟು ಸಹಕರಿಸಬೇಕೆಂದು ಕೋರಲಾಗುತ್ತದೆ.


ಬೆಂಗಳೂರು ನಗರದಲ್ಲಿ ನಡೆದ ಸೋವಿಯತ್ ಚಲಚ್ಚಿತ್ರ ಪ್ರದರ್ಶನವನ್ನು ವೀಕ್ಷಿಸಲು ಟೌನ್‌ಹಾಲಿನ ಬಳಿ ಕಾಯುತ್ತಿದ್ದ ಜನಸಂದಣಿ



ಸೋವಿಯತ್ ಚಲಚ್ಚಿತ್ರ ಪ್ರದರ್ಶನೋತ್ಸವ

ನವೆಂಬರ್ 19, 20, 21, ಮೂರು ದಿನಗಳು ಬೆಂಗಳೂರು ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ನಡೆದ ಸೋವಿಯತ್ ಚಲನಚಿತ್ರ ಪ್ರದರ್ಶನವು ಅತ್ಯಂತ ಯಶಸ್ವಿಯಾಗಿ ನಡೆಯಿತು. ಸುಮಾರು 20,000ಕ್ಕೂ ಮಿಕ್ಕಿ ಜನರು ಚಲನಚಿತ್ರಗಳನ್ನು ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಭವ್ಯವಾದ ನಗರಭವನವನ್ನು ಸುಂದರವಾಗಿ ಅಲಂಕರಿಸಲಾಗಿತ್ತು. ದಿನಕ್ಕೆ 4 ಆಟಗಳಂತೆ ನಡೆದರೂ ಸಹ ಎಲ್ಲ ಆಟಗಳಿಗೂ ಜನ ಕಿಕ್ಕಿರಿದು ಸೇರಿತ್ತು. ಶಾಲಾ ಮಕ್ಕಳಿಗಾಗಿ ಏರ್ಪಡಿಸಿದ್ದ ವಿಶೇಷ ಪ್ರದರ್ಶನಗಳಿಗೆ ಸಾವಿರಾರು ಶಾಲಾ ಬಾಲಕರು ಆಗಮಿಸಿದ್ದರು. ಇಂಥ ಚಲನಚಿತ್ರ ಪ್ರದರ್ಶನವು ನಡೆದುದು ಬೆಂಗಳೂರಿನಲ್ಲಿ ಇದೇ ಮೊದಲಬಾರಿ. ಭಾರತ—ರಷ್ಯಾ ಸಾಂಸ್ಕೃತಿಕ ಸಂಘದವರು ಇಂಥ ಪ್ರದರ್ಶನಗಳನ್ನು ಇನ್ನಷ್ಟು ಹೆಚ್ಚು ಏರ್ಪಡಿಸಿದಲ್ಲಿ ಉತ್ತಮವಾಗುವುದು.



೨೧—೧೧—೫೭ರಂದು ಮಕ್ಕಳಿಗಾಗಿ ನಡೆದ ಚಲಚ್ಚಿತ್ರ ಪ್ರದರ್ಶದಲ್ಲಿ ಮಕ್ಕಳು ಚಿತ್ರವನ್ನು ನೋಡುತ್ತಿರುವುದು

ಛಾಯಾ ಚಿತ್ರಗಳು: ಎನ್. ಸಿ. ರಣನವರೆ

ಕಾರ್ಪೊರೇಷನ್ ಚುನಾವಣೆ

(ಒಂದನೆ ಪುಟದಿಂದ)

ಸಂಯುಕ್ತರಂಗ) 1878

ಶ್ರೀ ಕೆ. ಶ್ರೀರಾಮುಲು(ಕಾಂಗ್ರೆಸ್) 2508

ಶ್ರೀ ಎಸ್. ವೆಂಕಟರಾಂ (ಸೋಷಲಿಸ್ಟ್) 1871

ಶ್ರೀ ಜಿ. ರಂಗಪ್ಪ (ನಾಗರಿಕ ಸಂಯುಕ್ತರಂಗ) 1462

ಶ್ರೀ ಕನಕಸುಂದರ್ (ದ್ರಾವಿಡ ಮುನ್ನೇತ್ರಕಜಗಂ) 1412

ಶ್ರೀ ಸಿ. ಧರ್ಮಲಿಂಗಂ (ಸ್ವತಂತ್ರ) 292

ನಾನ್ ಟೆಕ್ಸ್‌ಟೈಲ್ ಕ್ಷೇತ್ರ

ಮತದಾರರು 14 948. 2ಸ್ಥಾನಗಳು

ಶ್ರೀ ಡಿ. ಎಸ್. ಶ್ರೀರಾಮುಲು (ನಾಗರಿಕ ಸಂಯುಕ್ತರಂಗ (ಕಮ್ಯೂನಿಸ್ಟ್) 3758

ಶ್ರೀ ಎಂ. ಪಳನಿವೇಲು (ನಾಗರಿಕ ಸಂಯುಕ್ತರಂಗ) 3,650

ಶ್ರೀ ಟಿ. ಐ. ಮಾಧವನ್ (ಸೋಷಲಿಸ್ಟ್) 2989

ಶ್ರೀ ಬಿ. ಕೆ. ಶ್ರೀರಾಮಯ್ಯ(ಸ್ವತಂತ್ರ) 3318

ಫಲಿತಾಂಶಗಳು ಹೊರಬಿದ್ದ ನಂತರ ಕಾರ್ಮಿಕರು ಜಯಘೋಷಗಳೊಡನೆ ಗೆದ್ದ ತಮ್ಮ ಪ್ರತಿಧಿಗಳಿಗೆ ಹಾರವನ್ನರ್ಪಿಸಿದರು.

ಕಾರ್ಪೊರೇಷನ್ನಿನ ಉಳಿದ ಸ್ಥಾನಗಳಿಗೆ ಚುನಾವಣೆಗಳು ಈ ತಿಂಗಳಲ್ಲಿ ನಡೆಯಲಿದೆ. ನಾಗರಿಕ ಸಂಯುಕ್ತರಂಗಕ್ಕೆ ಇನ್ನೂ ಹೆಚ್ಚಿನ ಜಯ ದೊರಕುವುದರಲ್ಲಿ ಸಂಶಯವಿಲ್ಲ.

REG. No. M. 6867

Edited Printed and Published by C. R. Krishna Rao, at Janashakthi Printers, L—59, K. V. Temple St., Sultanpet Bangalore—2 phone : 3810